ಕಲ್ಯಾಣ ಕಿರಣ

ಮಾರ್ಚ್-2013

ಬೆಲೆ ರೂ-20/-



ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು

Digitalized by e-Sahithya Documentation Forum
Sponsored by Sarayu Foundation Trust



ಬೀದರಿನ ಅಭಿನಂದನ ಸಮಾರಂಭ, ದಿ. 25-2-2013
ಶರಣ ಬಾಬು ವಾಲಿಯವರಿಂದ ನೆನಪಿನ ಕಾಣಿಕೆ ನೀಡಿಕೆ.



ಅಭಿನಂದನ ಸಮಾರಂಭದಲ್ಲಿ ದೊಡ್ಡ ಗಾತ್ರದ ಮಾಲೆಯ ಅರ್ಪಣೆ ಕಾರ್ಯಾಧ್ಯಕ್ಷ ಶ್ರೀಕಾಂತ ಸ್ವಾಮಿ, ಗೌರವಾಧ್ಯಕ್ಷ ಬಿ.ಜಿ. ಶೆಟಕಾರ, ಅಮರ್ ಖರೋಳಕರ್ ಮುಂತಾದವರಿದ್ದಾರೆ.



ಅಭಿನಂದನ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಶ್ರೀ ಶಿವಯೋಗೇಂದ್ರ ಶಿವಾಚಾರ್ಯ ಸ್ವಾಮಿಗಳಿಂದ.

ಬೆಂಗಳೂರಿನ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ

ಪೂಜ್ಯ ಮಾತಾಜಿಯವರ 68ನೆಯ ವರ್ಧಂತಿ ಆಚರಣೆ

ಪ್ರಥಮ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ.13-3-2013ರಂದು 67 ವರ್ಷಗಳನ್ನು ಪೂರೈಸಿ 68ನೆಯ ವರ್ಷಕ್ಕೆ ಪಾದಾರ್ಪಣ ಮಾಡಲಿದ್ದಾರೆ. ಅಂದು ಬೆಳಿಗ್ಗೆ 10-30 ರಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ಬೆಂಗಳೂರಿನ ಬಸವ ಮಂಟಪದಲ್ಲಿ ಏರ್ಪಡಿಸಲಾಗಿದೆ. ಪಾದಪೂಜೆ, ಪುಷ್ಪವೃಷ್ಟಿ ಮುಂತಾದ ಕಾರ್ಯಕ್ರಮಗಳು ಬುಧವಾರ ದಿ.13-3-2013ರಂದು ನಡೆಯುತ್ತವೆ. ಶರಣ(ಶನಿ)ವಾರ ದಿ.23-3-2013 ರಂದು ಸಾರ್ವಜನಿಕ ಅಭಿನಂದನ ಸಮಾರಂಭವನ್ನು ಸರ್.ಕೆ.ಪಿ.ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ಏರ್ಪಡಿಸಲಾಗಿದೆ. ಈ ಅಭಿನಂದನ ಸಮಾರಂಭವು ಶನಿ(ಶರಣ)ವಾರ ದಿ.23-3-2013ರಂದು ಬೆಳಿಗ್ಗೆ 10-30ರಿಂದ ಜರುಗಲಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಿ
ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಮೆಜೆಸ್ಟಿಕ್‌ನಿಂದ ರೂಟ್‌ನಂ. 78, 80, 89, ಬಸ್ಸುಗಳು ಬಸವ ಮಂಟಪದ ಸಮೀಪದಲ್ಲಿರುವ ನವರಂಗ್ ಟಾಕೀಸ್ ಬಳಿ ನಿಲ್ಲುತ್ತವೆ. ಯಲಹಂಕ ಕಡೆಯಿಂದ ರೂ.ನಂ. 401 ಬಿ, 401 ಕೆ, 401 ಆರ್. ಬಸ್ಸುಗಳು ಬಂದು ಬಸವ ಮಂಟಪದ ಮುಂದೆ ನಿಲ್ಲುತ್ತವೆ.

ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ
ಕಾರ್ಯದರ್ಶಿ, ವಿಶ್ವಕಲ್ಯಾಣ ಮಿಷನ್
ಬಸವ ಮಂಟಪ, 2035, 20ನೇ ಮುಖ್ಯರಸ್ತೆ, 2ನೆ ಬ್ಲಾಕ್, ರಾಜಾಜಿನಗರ, ಬೆಂಗಳೂರು

8ನೆಯ ಲಿಂಗಾಯತ ಗಣ ಮೇಳಾವ - ಸ್ಥಳ ಬದಲಾವಣೆ

ಪ್ರತಿವರ್ಷ ಯುಗಾದಿಯಿಂದ ಮೂರು ದಿವಸಗಳ ಕಾಲ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಗಲೆ ತಾಲ್ಲೂಕಿನ ಆಳತೆಗ್ರಾಮ ವ್ಯಾಪ್ತಿಯಲ್ಲಿ ಬರುವ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣ ಮೇಳವನ್ನು 2006ನೆಯ ಇಸವಿಯಿಂದಲೂ ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2013ನೆಯ ಸಾಲಿನ ಗಣ ಮೇಳವು ಏಪ್ರಿಲ್ 11, 12, 13ರಂದು ಒದಗಿ ಬಂದಿದೆ. ಕಳೆದ ವರ್ಷ ಮಳೆಯು ಸರಿಯಾಗಿ ಆಗದೆ ಅಲ್ಲಮಗಿರಿಯ ಗುಡ್ಡದ ಮೇಲೆ ಬೋರ್‌ಗಳು ಬತ್ತಿ ಹೋಗಿವೆ. ರಸ್ತೆಯು ಪೂರಾ ಕೆಟ್ಟುಹೋಗಿದ್ದು ನೀರನ್ನು ಒದಗಿಸುವ ಲಾರಿಗಳವರು ನೀರು ಒದಗಿಸಲು ನಿರಾಕರಿಸುತ್ತಿದ್ದಾರೆ. ಈ ವರ್ಷ ಸರಿಯಾಗಿ ಮಳೆಯಾಗಿ ಮುಂದಿನ ವರ್ಷ ಪರಿಸ್ಥಿತಿ ಸುಧಾರಿಸಬಹುದು ಎಂಬ ನಿರೀಕ್ಷೆಯಿಂದ ಈ ವರ್ಷದ ಗಣ ಮೇಳದ ಸ್ಥಳವನ್ನು ಬದಲಾಯಿಸಲಾಗಿದೆ.

2013ರ ಏಪ್ರಿಲ್ 11, 12, 13ರಂದು 8 ನೆಯ ಲಿಂಗಾಯತ ಗಣಮೇಳ ನಡೆಯುವ ಸ್ಥಳ : **ರಘು ಜಾನಕಿ ಸಾಂಸ್ಕೃತಿಕ ಭವನ, ಹಾತ್‌ಕಣಂಗಲೆ-ಇಚಲಕರಂಜಿ ರಸ್ತೆ, ಹಾತ್‌ಕಣಂಗಲೆ ಕೊರೋಚಿ(ಗ್ರಾಮ)** ಹತ್ತಿರ.

ಶರಣ ಬಂಧುಗಳು ಅಲ್ಲಮಗಿರಿಗೆ ಹೋಗದೆ ಸೀದಾ ಫಂಕ್ಷನ್‌ಹಾಲ್‌ಗೆ ಬರಬೇಕೆಂದು ಕೋರುತ್ತೇವೆ. ಹಾತ್‌ಕಣಂಗಲೆವರೆಗೆ ರೇಲ್ವೆ ಅನುಕೂಲತೆ ಇದೆ. ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್ ಹಾತಕಣಂಗಲೆಗೆ ಬರುತ್ತದೆ.

ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು
ಸಂಪರ್ಕಿಸುವ ದೂರವಾಣಿ: 09212627150, 09880296108
ಪೂಜ್ಯ ಶ್ರೀ ಜಗದ್ಗುರು ಬಸವಲಿಂಗ ಸ್ವಾಮಿಗಳು 09420585881

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-43 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-3 ಮಾರ್ಚ್-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ-ಉತ್ಸವಗಳು

1. ಶಿವರಾತ್ರಿ -ಗಣಮೇಳ - ಮಾರ್ಚ್ 10
2. ಪೂಜ್ಯ ಮಾತಾಜಿಯವರ 68ನೆಯ ವರ್ಧಂತಿ ಅಭಿನಂದನ ಕಾರ್ಯಕ್ರಮ(ಬೆಂಗಳೂರು) - ಮಾರ್ಚ್23
3. ಅಭಿನಂದನ ಕಾರ್ಯಕ್ರಮ (ಪೂಜ್ಯ ಮಾತಾಜಿ ಹುಟ್ಟಿದ ಗ್ರಾಮವಾದ ಸಾಸಲಟ್ಟಿಯ ಅಕ್ಕಮಹಾದೇವಿ ಮಠದಲ್ಲಿ. (ತಾ-ಚಿತ್ರದುರ್ಗ) - ಮಾರ್ಚ್ 24
4. ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳ - ಏಪ್ರಿಲ್ 11,12,13
5. ಅಕ್ಕಮಹಾದೇವಿ ಜಯಂತಿ - ಏಪ್ರಿಲ್ 25
6. ಧಾರವಾಡದ ಅಕ್ಕಮಹಾದೇವಿ ಮಠದಲ್ಲಿ - ಶರಣೋತ್ಸವ - ಏಪ್ರಿಲ್ 27,28,29

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಸಂಪಾದಕೀಯ :

1. ಚವಳಿ ಮಠದ ಸ್ವಾಮಿಗಳ ದೇಹತ್ಯಾಗ

ಧಾರ್ಮಿಕ ಜಗತ್ತಿನಲ್ಲಿ ಅತ್ಯಂತ ಆಘಾತಕರವಾದ ಒಂದು ಸುದ್ದಿ ಬಂತು. ದಿ.1-3-2013 ರಂದು ದೇಹತ್ಯಾಗ ಮಾಡಿದ ಬೀದರಿನ ಪೂಜ್ಯ ಶ್ರೀ ಗಣೇಶ್ವರ ಅವಧೂತ ಸ್ವಾಮಿಗಳ ದೇಹಾಂತ್ಯದ ಸುದ್ದಿಯದು. ಚವಳಿ ಮುತ್ತ್ಯಾ ಎಂದು ಪ್ರಸಿದ್ಧರಾಗಿದ್ದರವರು. ಟಿ.ವಿ. ಮಾಧ್ಯಮದಿಂದಾಗಿ ಅವರು ಜೀವಂತವಾಗಿದ್ದಾಗಿಗಿಂತಲೂ ದೇಹತ್ಯಾಗ ಮಾಡಿ ಹೆಚ್ಚು ಸುದ್ದಿಯಾದರು. ಚವಳಿ ಎನ್ನುವುದು ಬೀದರ ನಗರದಲ್ಲಿ ಕರಗಿ ಹೋಗಿರುವ ಒಂದು ಗ್ರಾಮ. ಗುಲಬರ್ಗಾ-ಬೀದರ ಮಾರ್ಗವಾಗಿ ಬಂದಾಗ ಒಂದು ಮಹಾದ್ವಾರ ಬೀದರ್ ಪ್ರವೇಶ ಮಾಡುತ್ತಿದ್ದಂತೆಯೇ ಕಾಣುತ್ತದೆ. ಅದರ ಮೇಲೆ ಚವಳಿ ಮುತ್ತ್ಯಾ ಅವರದೆ ಬಗೆಬಗೆಯ ಭಂಗಿಯ ಉಬ್ಬು ಶಿಲ್ಪಗಳು. (ಪೂಜ್ಯರು ಪ್ರಚಾರ ಪ್ರಿಯರೋ ಅಥವಾ ಅವರ ಭಕ್ತರು ಅವರನ್ನು ವೈಭವೀಕರಿಸುವರೋ ತಿಳಿಯದು. ಶ್ರೀಶೈಲದ ಕದಳಿವನಕ್ಕೆ ಹೋಗುವ ಮಧ್ಯದಲ್ಲಿ ಬರುವ ಅಕ್ಕಮ್ಮ ವಾಗು (ಅಕ್ಕನ ಹಳ್ಳ) ಎಂಬ ಸ್ಥಳದಲ್ಲಿರುವ ಅಕ್ಕಮಹಾದೇವಿ ಗವಿಯ ಮೇಲ್ಭಾಗದಲ್ಲಿ ಚವಳಿ ಮುತ್ತ್ಯಾನ ಮೂರ್ತಿಯನ್ನು ಮಾಡಿಸಿದ್ದಾರೆ. ಕದಳಿವನ ಸಂದರ್ಶನಕ್ಕೆ ಹೋಗಿ ಬಂದ ಪ್ರತಿಯೊಬ್ಬರೂ ತುಂಬಾ ದುಃಖದಿಂದ ಈ ವಿಷಯ ಹೇಳುತ್ತಾರೆ.)

ದಿ.28-2-2013ರಂದು ಪೂಜೆಗಾಗಿ ಗವಿಯೊಳಕ್ಕೆ ಹೋದ ಸ್ವಾಮೀಜಿ ಎಷ್ಟು ಹೊತ್ತಾದರೂ ಬಾಗಿಲುತೆಗೆದು ಹೊರಗೆ ಬರದೆ ಇದ್ದಾಗ ಭಕ್ತರು ಗಾಬರಿಯಿಂದ ನೋಡುವಾಗ ಒಂದು ಚೀಟಿ ಸಿಕ್ಕಿತಂತೆ, ಅದರಲ್ಲಿ "ನಾನು ದೇಹತ್ಯಾಗ ಮಾಡುತ್ತೇನೆ" ಎಂದು ಇತ್ತಂತೆ. ಆಗ ಶ್ರೀಗಳು ಧ್ಯಾನಕ್ಕೆ ಹೋಗಿದ್ದ ಗವಿಯ ಬಾಗಿಲನ್ನು ಒಡೆದು ನೋಡಿದಾಗ ಆಗಲೇ ಶ್ರೀಗಳ ಪ್ರಾಣಹಾರಿಹೋಗಿತ್ತು. ಅವರೇ ಬರೆದಿಟ್ಟ ಒಂದು ಮೃತ್ಯು ಪತ್ರ (death note); ಅದರಲ್ಲಿ ಮುಖ್ಯವಾಗಿ ಪ್ರಸ್ತಾಪಿಸಿದ ವಿಷಯ "ನಾಲ್ಕೈದು ವರ್ಷಗಳಿಂದ ಆಶ್ರಮವಾಸಿ ಸಾಧಕರಿಗೆ ತುಂಬಾ ಕಿರುಕುಳವಾಗುತ್ತಿದೆ. ಅದರಿಂದ ತಮಗೆ ತುಂಬಾ ನೋವುಂಟಾಗಿದೆ" ಎಂಬುದು. ಒಂದು ತಿಂಗಳಿನ ಹಿಂದೆ ದಿ.30-1-2013ರಂದು ರಾತ್ರಿ ಬಹಿರ್ದೆಸೆಗೆ ಹೋಗಿದ್ದ ಕಿರಿಯ ಸ್ವಾಮಿಗಳಾದ ಮಾರುತಿ ಸ್ವಾಮಿ ಅವರನ್ನು ಅಪಹರಿಸಲಾಗಿತ್ತು. ಈ ಬಗ್ಗೆ ದೂರುಕೊಟ್ಟರೂ ಪೋಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಒಂದು ತಿಂಗಳಾದರೂ ಮಾರುತಿ ಸ್ವಾಮಿಗಳ ಬಗ್ಗೆ ಏನೂ ತಿಳಿಯದೆ ಇರುವುದು ಹಿರಿಯ ಶ್ರೀಗಳಿಗೆ ತುಂಬಾ ವ್ಯಥೆಯನ್ನು ಉಂಟು ಮಾಡಿತ್ತು. ಹೀಗಾಗಿ ದೇಹತ್ಯಾಗ ಮಾಡುತ್ತಿದ್ದೇನೆ ಎಂದು ಬರೆದಿಟ್ಟಿದ್ದಾರೆ.

ಅಧ್ಯಾತ್ಮ ಲೋಕದಲ್ಲಿ ಇದು ತುಂಬಿ ಬಾರದ ನಷ್ಟಮಾತ್ರವಲ್ಲದೆ ತ್ಯಾಗಿಗಳು, ಯೋಗಿಗಳು ಆದ ಸಾಧಕರನ್ನು ಎದೆಗೆಡಿಸುವ ಪ್ರಸಂಗ. ಮಠದ ಆಸ್ತಿಯ ಮೇಲೆ ಕಣ್ಣು ಹಾಕಿ, ಮಠದ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳಬೇಕು ಎನ್ನುವ ಕೆಲವರಿಂದ ಪೂಜ್ಯ ಸ್ವಾಮಿಗಳಿಗೆ ಬೆದರಿಕೆಯ, ಜೀವಭಯ ಉಂಟು ಮಾಡುವ ಕರೆಗಳು ದೂರವಾಣಿಯಲ್ಲಿ ಬರುತ್ತಿದ್ದವು ಎಂದೂ ಸುದ್ದಿ ಇದೆ. ಅದೇ ದುಷ್ಟಶಕ್ತಿಗಳು ಮಾರುತಿ ಸ್ವಾಮಿಯವರಿಗೆ ಚೂರಿ ಹಾಕಿದ್ದವು, ಅವರು ಭೀಕರ ಹಲ್ಲೆಗೊಳಗಾಗಿ ಪ್ರಾಣಾಪಾಯದಿಂದ ಪಾರಾಗಿದ್ದರಂತೆ. ಆ ದುಷ್ಟಶಕ್ತಿಗಳ ಬಗ್ಗೆ ಸ್ವಾಮಿಗಳು ದೂರನ್ನು ಕೊಟ್ಟಿದ್ದರೂ ಪೋಲೀಸರು ಕೇವಲ ಉದಾಸೀನತೆ ಮಾತ್ರ ತೋರದೆ ದುಷ್ಟಶಕ್ತಿಗಳ ಜೊತೆ ಕೈಜೋಡಿಸಿರಲೂಬಹುದು. (ಮೊದಲನೆಯ ಕಲ್ಯಾಣ ಪರ್ವದಲ್ಲಿ ನಮಗೆ ಇದರ ಅನುಭವವಾಗಿದೆ. ಪೋಲೀಸ್ ಇಲಾಖೆ ದುಷ್ಟಶಕ್ತಿಗಳ ಕೈ ಜೋಡಿಸಿ ನಿರಪರಾಧಿಗಳಾದ ಭಕ್ತರನ್ನು, ಮುದುಕರನ್ನು, ಮಹಿಳೆಯರನ್ನು, ಮಕ್ಕಳನ್ನು ಮುಖಮೂತಿ ನೋಡದೆ ಹೊಡೆದರು. ಕಾರ್ಯಕ್ರಮಕ್ಕೆ ರಕ್ಷಣೆ ಕೊಡುವ ಬದಲು ತೊಂದರೆ ಕೊಟ್ಟರು.) ಹೀಗಾಗಿ ಅವರು ನಿಸ್ಸಹಾಯಕತನವನ್ನು ಒಂಟಿತನವನ್ನೂ ಅನುಭವಿಸುತ್ತಿದ್ದರು ಅಂತ ಕಾಣುತ್ತದೆ. ಹೀಗಾಗಿ ಅವರು ದೇಹತ್ಯಾಗ ಮಾಡಿದ್ದಾರೆ. ಹಿರಿಯರು ದೇಹತ್ಯಾಗ ಮಾಡಿದರು, ಕಿರಿಯರು

Digitalized by e-Sahithya Documentation Forum
Sponsored by Sarayu Foundation Trust

ಅಪಹರಣವಾಗಿದ್ದಾರೆ. (ಅವರು ಜೀವಂತವಿರುವ ಬಗ್ಗೆ ಅನೇಕರು ಸಂದೇಹ ವ್ಯಕ್ತಪಡಿಸುತ್ತಿದ್ದಾರೆ) ಇನ್ನು ಮಠದ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಹೊಂಚುಹಾಕುತ್ತಿದ್ದ ಘಟಿಂಗರಿಗೆ ದಾರಿ ಸುಲಭವಾಯಿತು. ಜೀವಂತ ಸಮಾಧಿಯಾಗುವ ವಯಸ್ಸು ಸ್ವಾಮೀಜಿಯವರದಾಗಿರಲಿಲ್ಲ. ಅವರು ದುಡುಕಿದರು ಎಂಬುದು ಸುಸ್ಪಷ್ಟ. ಅವರು ದೇಹತ್ಯಾಗವನ್ನು (ಸ್ವ-ಇಚ್ಛಾಮರಣ)ಹೇಗೆ ಮಾಡಿದರು? ಅಷ್ಟು ವೇಗವಾಗಿ ಫಲಕಾರಿಯಾದ ವಿಧಾನ ಯಾವುದು ಎಂಬುದು ನಿಗೂಢವಾಗಿ ಉಳಿಯಿತು. ಅವರಿಗೆ ಬೆದರಿಕೆ ಕರೆ ಮಾಡಿ ಬ್ಲ್ಯಾಕ್ ಮೇಲ್ ಮಾಡಲು ಸಿಕ್ಕಿದ್ದ ವಿಷಯ ಯಾವುದು ? ಮಾಡುತ್ತಿದ್ದವರು ಯಾರು ? ಎಂಬುದು ಪೋಲೀಸ್ ಇಲಾಖೆಯ ತನಿಖೆಯಿಂದ ಹೊರಬರಬೇಕು. ಆದರೆ ಅದನ್ನು ಬಹಿರಂಗಗೊಳಿಸಿ, ದುಷ್ಟರನ್ನು ಶಿಕ್ಷಿಸುವ ಇಚ್ಛಾಶಕ್ತಿ ಪೋಲೀಸ್ ಇಲಾಖೆಗೆ ಇದೆಯೆ ?

2. ಗಲ್ಲು ಶಿಕ್ಷೆ-ಇರಬೇಕೆ ಬೇಡವೆ ?

ಇತ್ತೀಚೆಗೆ, ಮುಂಬೈ ಬಾಂಬ್ ಸ್ಫೋಟದ ರೂಹಾರಿ ಕಸಬ್‌ಗೆ ಮತ್ತು ಸಂಸತ್ ಭವನದ ಮೇಲೆ ದಾಳಿ ಮಾಡಿದ ಅಫ್ಜಲ್ ಗುರುಗೆ ಗಲ್ಲು ಶಿಕ್ಷೆ ಜಾರಿಯಾಯಿತು. ಪೋಲೀಸರನ್ನು ನೆಲಬಾಂಬ್ ಸ್ಫೋಟಿಸಿ ಅಮಾನುಷವಾಗಿ ಹತ್ಯೆ ಮಾಡಿದ ಕಾಡುಗಳ್ಳ, ದಂತಚೋರ ವೀರಪ್ಪನ್‌ನ ನಾಲ್ವರು ಸಹಚರರಿಗೆ ಗಲ್ಲು ಶಿಕ್ಷೆಯ ಆದೇಶ, ರಾಷ್ಟ್ರಪತಿಯವರ ಕ್ಷಮಾದಾನ ಅರ್ಜಿಯ ನಿರಾಕರಣೆಯ ಮೂಲಕ, ಖಚಿತವಾಗಿದೆ. ಅವರೀಗ ಸುಪ್ರೀಂ ಕೋರ್ಟಿನ ಮೆಟ್ಟಿಲನ್ನು ಏರಿದ್ದಾರೆ. ಈಗ ಕೆಲವರು ಮಾನವೀಯತೆಯ ಮಾತನ್ನಾಡುತ್ತಿದ್ದಾರೆ. ಅವರನ್ನು ಕ್ಷಮಿಸಬೇಕೆಂದು ಕೆಲವರು, ಗಲ್ಲುಶಿಕ್ಷೆ ಇರಲೇಬಾರದೆಂದು ಜೀವಿತಾವಧಿಯವರೆಗೆ ಜೈಲು ಶಿಕ್ಷೆ ಕೊಟ್ಟರೆ ಸಾಕೆಂದು ಕೆಲವರು ವಾದಿಸುತ್ತಿದ್ದಾರೆ. ಈ ಬಗ್ಗೆ ನಮ್ಮ ಅಭಿಪ್ರಾಯವೇನು ಎಂದು ಅನೇಕರು ಕೇಳುತ್ತಿದ್ದಾರೆ.

ಗುರು ಬಸವಣ್ಣನವರ ವಚನಗಳಲ್ಲಿ 'ತಲೆದಂಡ' ಎಂಬ ಪದ ಹಲವಾರು ಬಾರಿ ಬರುತ್ತದೆ. ಆಗಿನ ಕಾಲದಲ್ಲಿ ತಲೆ ಕತ್ತರಿಸುವ ಶಿಕ್ಷೆ (ಶಿರಶ್ಛೇದ), ಶೂಲಕ್ಕೆ ಏರಿಸುವ ಶಿಕ್ಷೆ ತಲೆದಂಡದಲ್ಲಿ ಜಾರಿ ಆಗುತ್ತಿತ್ತು. ಈಗ ಅಂತಿಮ ಶಿಕ್ಷೆ ನೇಣು. ಅದನ್ನೂ ನೋವು ರಹಿತವಾಗಿ ಕೊಡುತ್ತಾರೆ. ಅತ್ಯಂತ ಅಮಾನುಷವಾಗಿ ವರ್ತಿಸಿ ದಯೆ-ಮಾನವೀಯತೆ ಇಲ್ಲದೆ ಮುಂಬೈಯಲ್ಲಿ ಜನರನ್ನು ಕೊಂದ, ಸಂಸತ್ ಭವನದ ಮೇಲೆ ದಾಳಿ ಮಾಡಿ ಅನೇಕ ಯೋಧರನ್ನು ಕೊಂದ, ಹತ್ತಾರು ಪೋಲಿಸ್ ಪೇದೆಗಳನ್ನು ನಿರ್ದಯವಾಗಿ ಹತ್ಯೆ ಮಾಡಿದವರು ಮಾನವೀಯತೆಯ ಕ್ಷಮೆಗೆ ಅರ್ಹರೆ ? ನಮ್ಮ ದೇಶದಲ್ಲಿ ಕಾನೂನು ದುರ್ಬಲವಾಗಿ ಕೆಲಸ ಮಾಡುವುದರಿಂದಲೂ ಮತೀಯ ಸಂಗತಿಗಳು ರಾಜಕೀಯ ಮಾಡುವುದರಿಂದಲೂ ವಿಚಾರಣೆ ವಿಳಂಬವಾಯಿತಲ್ಲದೆ ಕಸಾಬ್ ಮತ್ತು ಅಫ್ಜಲಗುರು ಎಂಬ ಭಯೋತ್ಪಾದಕರನ್ನು ಕೋಟಿಗಟ್ಟಳೆ ಖರ್ಚುಮಾಡಿ ಸಾಕಿದ್ದಾಯಿತು. ಅವರನ್ನು ಕ್ಷಮಿಸಿ ಇಟ್ಟುಕೊಂಡರೆ ಇನ್ನೆಷ್ಟು ಖರ್ಚಾಗಬಹುದಿತ್ತು? ಆದ್ದರಿಂದ ಇವರು ಸಮಾಜಘಾತುಕ ಶಕ್ತಿಗಳಾಗಿದ್ದರಿಂದ ಗಲ್ಲು ಶಿಕ್ಷೆಯೇ ಸೂಕ್ತ. ಅದನ್ನು ರದ್ದುಪಡಿಸಬಾರದು.

ಅತ್ಯಾಚಾರಿಗಳಿಗೆ ಗಲ್ಲು

ಎಳೆಯ ಮಕ್ಕಳ ಮೇಲೆ, ಯುವತಿಯರ ಮೇಲೆ, ವೃದ್ಧೆಯರ ಮೇಲೆ ಅಮಾನುಷವಾಗಿ ಅತ್ಯಾಚಾರ ಮಾಡುವುದಲ್ಲದೆ ಅವರನ್ನು ಕೊಂದೂ ಹಾಕುವ ಕೆಲಸವು ವಿಪರೀತವಾಗುತ್ತಿದೆ. ಆದ್ದರಿಂದ ಅತ್ಯಾಚಾರವನ್ನಷ್ಟೆ ಮಾಡುವವರಿಗೆ ಹಲವಾರು ವರ್ಷಗಳ ಶಿಕ್ಷೆ ವಿಧಿಸಿ, ಅತ್ಯಾಚಾರ ಮಾಡಿದ್ದಲ್ಲದೆ ಕೊಂದೂ ಹಾಕುವವರಿಗೆ ಖಂಡಿತಾ ಗಲ್ಲುಶಿಕ್ಷೆಯಾಗಬೇಕು. ಅವರಿಗೆ ಕ್ಷಮೆ ಇರಬಾರದೆಂದೇ ನನ್ನ ಸ್ಪಷ್ಟ ಅಭಿಪ್ರಾಯ. ಈ ಭಯದಿಂದಲಾದರೂ ಅತ್ಯಾಚಾರ, ಕೊಲೆ ಮಾಡಲು ದುಷ್ಟ ಕಾಮುಕರು ಹಿಂಜರಿಯಬಹುದು.

ಪೂಜ್ಯ ಮಾತಾಜಿಯವರ ಅಭಿನಂದನ ಕಾರ್ಯಕ್ರಮ-ಬೆಂಗಳೂರು

ಬೆಂಗಳೂರಿನ ದಿ.16-3-2013ರಂದು ಸಾರ್ವಜನಿಕವಾಗಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಇಡಲಾಗಿದೆ ಎಂದು ಸ್ಥಳದ ಬಗ್ಗೆ ತಿಳಿಸದೆ ಫೆಬ್ರವರಿ ಕಲ್ಯಾಣಕಿರಣದಲ್ಲಿ ದಿನಾಂಕ ಮಾತ್ರ ತಿಳಿಸಲಾಗಿತ್ತು. ಅಂದು ಬೆಂಗಳೂರಿನ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಶೆಟ್ಟಿ (ಟೌನ್)ಹಾಲ್ ಲಭ್ಯವಿಲ್ಲದ್ದರಿಂದ, ದಿ.23ರಂದು ಲಭ್ಯವಿರುವುದರಿಂದ ಶರಣ(ಶನಿ)ವಾರ ದಿ.23-3-2013ರಂದು ಬೆಳಿಗ್ಗೆ 10-30ರಿಂದ ಅಭಿನಂದನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿನಂತಿ.

ಸಾಸಲಟ್ಟಿಯಲ್ಲಿ ದಿ.24 ರಂದು ಅಭಿನಂದನೆ.

ಪೂಜ್ಯ ಮಾತಾಜಿಯವರು ಜನಿಸಿದ ಗ್ರಾಮ ಸಾಸಲಟ್ಟಿ. ಇದು ಚಿತ್ರದುರ್ಗದಿಂದ 7 ಕಿಲೋ ಮೀಟರ್ ದೂರದಲ್ಲಿದೆ. ಪೂಜ್ಯ ಮಾತಾಜಿಯವರ ಮಾತೃಶ್ರೀ ಮತ್ತು ಅವರ ಮೊಮ್ಮಕ್ಕಳು ತಮ್ಮ ಪಿತ್ರಾರ್ಜಿತ ಒಂದು ತೋಟವನ್ನು (ಸುಮಾರು 2 ಎಕರೆ) ಬಸವ ಧರ್ಮ ಪೀಠಕ್ಕೆ ದಾನವಾಗಿ ಕೊಟ್ಟಿದ್ದಾರೆ. ಅಲ್ಲಿ ಅಕ್ಕಮಹಾದೇವಿ ಮಠವನ್ನು ಕಟ್ಟಲಾಗಿದ್ದು ಶರಣೆ. ವನಜಾಕ್ಷಮ್ಮ ನೋಡಿಕೊಳ್ಳುತ್ತಿದ್ದಾರೆ. ಶರಣ(ಶನಿ)ವಾರ ದಿ.23-3-2013 ರಂದು ರಾತ್ರಿ ಚಿತ್ರದುರ್ಗದ ಬಸವ ಮಂಟಪದಲ್ಲಿ ವಸತಿ ಮಾಡಿ, ದಿ.24 ರಂದು ಬೆಳ್ಳಿಗ್ಗೆ ಅಲ್ಲಿಂದ ಸಾಸಲಟ್ಟಿಗೆ ಬರಬಹುದು. ಚಿತ್ರದುರ್ಗದ ರಂಗಯ್ಯನ ಬಾಗಿಲು ರಸ್ತೆಯಲ್ಲಿ ಬಸವ ಮಂಟಪವಿದೆ.

ಸಂಪರ್ಕಿಸುವ ದೂರವಾಣಿ : ಶರಣೆ ವನಜಾಕ್ಷಮ್ಮ, ಸಾಸಲಟ್ಟಿ 9741259273

ಪೂಜ್ಯ ಶ್ರೀ ಮಾತೆ ದಾನೇಶ್ವರಿ, ಬಸವ ಮಂಟಪ, ಚಿತ್ರದುರ್ಗ. 8105273732/08194-225245

ಆಣದೂರ ಮತ್ತು ಬೀದರನಲ್ಲಿ ಅಭೂತಪೂರ್ವ ಅಭಿನಂದನ ಸಮಾರಂಭ

ದಿ.25-2-2013 ರಂದು ಬೀದರ್ ತಾಲ್ಲೂಕಿನ ಆಣದೂರದಲ್ಲಿ ಪೂಜ್ಯ ಮಾತಾಜಿಯವರನ್ನು ಭಕ್ತಿಪೂರ್ಣವಾಗಿ ಸ್ವಾಗತಿಸಿ, ವೈಭವಪೂರ್ಣವಾಗಿ ಮೆರವಣಿಗೆಯಲ್ಲಿ ಕರೆತಂದು ಸುಂದರವಾಗಿ, ಭವ್ಯವಾಗಿ ನಿರ್ಮಾಣವಾಗುತ್ತಿರುವ ಬಸವ ಮಂಟಪದಲ್ಲಿ ಸತ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಬಂಡೆಪ್ಪ ಕಾಶಂಪುರ, ಗಣ್ಯರಾದ ಅಶೋಕ ಖೇಣಿ, ಅವರ ಸಹೋದರ ಸಂಜಯ್ ಖೇಣಿ, ಬಾಬು ವಾಲಿ, ಮೀನಾಕ್ಷಿ ಸಂಗ್ರಾಮ, ಬಸವಕುಮಾರ ಪಾಟೀಲ್ ಮುಂತಾದವರು ಭಾಗವಹಿಸಿದ್ದರು.

ಸಂಜೆ 5 ಕ್ಕೆ ಶ್ರೀ ಬಸವೇಶ್ವರ ವೃತ್ತದಲ್ಲಿ ಶ್ರೀ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡಿ, ಪೂಜ್ಯ ಮಾತಾಜಿಯವರ ಮೆರವಣಿಗೆಗೆ ಚಾಲನೆ ನೀಡಲಾಯಿತು. ಸಿಂಗರಿಸಿದ ಭವ್ಯವಾದ ರಥದಲ್ಲಿ ಪೂಜ್ಯರನ್ನು ಕೂರಿಸಿ ಭಕ್ತಿಪೂರ್ಣವಾಗಿ ಹಾಡುತ್ತ ನರ್ತಿಸುತ್ತ ಶರಣ-ಶರಣೆಯರು ವೇದಿಕೆಗೆ ಕರೆತಂದರು. ನಗರದ ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್ ಮೈದಾನದಲ್ಲಿ ಭವ್ಯವಾದ ವೇದಿಕೆ ಸಿದ್ಧವಾಗಿದ್ದು. ಸಹಸ್ರಾರು ಜನರು ಸಮಾವೇಶವಾಗಿದ್ದರು. ಜಿಲ್ಲೆಯ ಅನೇಕ ಮಠಾಧೀಶರು, ಗಣ್ಯರು ಭಾಗವಹಿಸಿದ್ದರು. ಶಾಸಕರಾದ ಬಂಢೆಪ್ಪ ಕಾಶಂಪೂರ್ ರಥದಲ್ಲಿದ್ದ ಪೂಜ್ಯರಿಗೆ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು. ಮತ್ತೊಬ್ಬ ಶಾಸಕ ರಹೀಂಖಾನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಅಭಿನಂದನಾ ಸಮಿತಿಯ ಅಧ್ಯಕ್ಷರಾದ ಶ್ರೀಕಾಂತ ಸ್ವಾಮಿಯವರು ಪ್ರಾಸ್ತಾವಿಕವಾಗಿ ಕಾರ್ಯಕ್ರಮದ ಉದ್ದೇಶ ಕುರಿತು ಮಾತನಾಡಿದರು. ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ ಪೂಜ್ಯರ ಪರಿಚಯ ಮಾಡಿದರು. ಸುರೇಶ್ ಸ್ವಾಮಿಯವರು ಸಭಾ ನಿರೂಪಣೆ ಮಾಡಿದರು.

ಅಭಿನಂದನಾ ಪತ್ರವನ್ನು ಸಮರ್ಪಿಸಲಾಯಿತು. 5000 ಕುರ್ಚಿಗಳನ್ನು ಹಾಕಲಾಗಿದ್ದು, ಅವೆಲ್ಲ ತುಂಬಿ ಜನರು ನೆಲದ ಮೇಲೆ ಕುಳಿತಿದ್ದರು, ಸುತ್ತಲೂ ನಿಂತಿದ್ದರು. ಚನ್ನಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ ಎಲ್ಲರಿಗೂ ಪ್ರಸಾದ ದಾಸೋಹ ಏರ್ಪಡಿಸಲಾಗಿತ್ತು. **

Digitalized by e-Sahithya Documentation Forum
Sponsored by Sarayu Foundation Trust

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ

ಅಭಿನಂದನಾ ಪತ್ರ

ಕೂಡಲ ಸಂಗಮದ ಬಸವ ಧರ್ಮ ಪೀಠದ ಪೀಠಾಧ್ಯಕ್ಷರು, ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳೂ ಆಗಿರುವ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಬಸವ ಕಲ್ಯಾಣ ಕ್ಷೇತ್ರದಲ್ಲಿ ವಿಶ್ವಗುರು ಬಸವಣ್ಣನವರ 108 ಅಡಿ ಎತ್ತರದ ಪುತ್ಥಳಿಯನ್ನು ನಿರ್ಮಿಸಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಬಸವ ಕಲ್ಯಾಣ ಕ್ಷೇತ್ರದ ಖ್ಯಾತಿ ಬೆಳೆಸಿದ್ದು, ತನ್ಮೂಲಕ ಬೀದರ ಜಿಲ್ಲೆಗೆ ಮತ್ತು ಬಸವ ಧರ್ಮಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಕಾರಣ ಬೀದರ ಜಿಲ್ಲೆಯ ಸಮಸ್ತ ಬಸವ ಭಕ್ತರ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಚಿನ್ಮಯಜ್ಞಾನಿ ಚನ್ನಬಸವಣ್ಣನವರ 817ನೇ ಸಂಸ್ಮರಣೋತ್ಸವ ಹಾಗೂ ಚನ್ನಹುಣ್ಣಿಮೆ ದಿವಸ ಅಂದರೆ ದಿನಾಂಕ 25-02-2013 ರಂದು ಬ್ಯಾಕ್ವರ್ಡ್ ಕ್ಲಾಸ್ ಹಾಸ್ಟೆಲ್ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಪೂಜ್ಯ ಮಾತಾಜಿಯವರಿಗೆ ಅರ್ಪಿಸಲಾದ ಅಭಿನಂದನಾ ಪತ್ರ –

ಪೂಜ್ಯ ಮಾತಾಜಿಯವರಿಗೆ ಶಿರ ಸಾಷ್ಟಾಂಗ ಪ್ರಣಾಮಗಳು. ತಮ್ಮ ಪಾದಕ್ಕೆ ಅನಂತ ಶರಣು ಶರಣಾರ್ಥಿಗಳು.

ಪೂಜ್ಯ ಮಾತಾಜಿಯವರೇ,

ತಾವು ಚಿನ್ಮೂಲಾದ್ರಿಯ ಚಿತ್ಕಳೆಯಾಗಿ ಚಿತ್ರದುರ್ಗ ಜಿಲ್ಲೆಯ ಸಾಸಲಟ್ಟಿ ಗ್ರಾಮದಲ್ಲಿ ಶರಣೆ ಗಂಗಮ್ಮ ಮತ್ತು ಡಾ॥ ಬಸಪ್ಪನವರ ಪುಣ್ಯ ಗರ್ಭದಲ್ಲಿ 1946, ಮಾರ್ಚ 13 ರಂದು ಜನಿಸಿ, ವೈರಾಗ್ಯನಿಧಿ ಅಕ್ಕಮಹಾದೇವಿಯವರ ಪ್ರತಿರೂಪವೇ ಆಗಿ ವಿಶ್ವವೆಲ್ಲ ಸುತ್ತಿಬಂದು ವಿಶ್ವಗುರು ಬಸವಣ್ಣನವರ ತತ್ವವನ್ನು ದಶದಿಕ್ಕುಗಳಲ್ಲಿ ಬಿತ್ತರಿಸಿದಿರಿ. ಪೂಜ್ಯ ಮಾತಾಜಿ ಎಂದೇ ಪ್ರಖ್ಯಾತರಾಗಿರುವ ತಾವು ಕೋಟಿ ಕೋಟಿ ಭಕ್ತರಿಗೆ ತಾಯಿಯ ಕರುಣೆ ನೀಡುತ್ತಿದ್ದೀರಿ.

ಅಪೂರ್ವ ವಾಗ್ಮಿಗಳೇ,

ಎಂಥ ಕಲ್ಲು ಹೃದಯಗಳನ್ನು ಕೂಡಾ ಕರಗಿಸುವಂಥ ಅಪೂರ್ವ ವಾಗ್ಮಿತ್ವವು ತಮಗೆ ದೈವೀದತ್ತ ಕೊಡುಗೆಯಾಗಿ ಮಂತ್ರಪುರುಷ ಬಸವಣ್ಣನವರಿಂದ ಬಂದಿದೆ. 1965 ರಲ್ಲಿ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮೀಜಿಯವರಿಂದ ಇಷ್ಟಲಿಂಗದೀಕ್ಷೆ ಹಾಗೂ ಜಂಗಮದೀಕ್ಷೆ ಪಡೆದು ವೀರ ವಿರಾಗಿಣಿಯಾಗಿ ತಮ್ಮ ಅಮೋಘ ವಾಣಿಯಿಂದ ಕೋಟಿ ಕೋಟಿ ಜನಗಳ ಮನದಲ್ಲಿ ಬಸವ ತತ್ವದ ಬೀಜಗಳನ್ನು ಬಿತ್ತಿ ಬೆಳೆದಿದ್ದೀರಿ. ಹಳ್ಳಿಗೆ ಏಕರಾತ್ರಿಯಂತೆ ಪಟ್ಟಣಕ್ಕೆ ಪಂಚರಾತ್ರಿಯಂತೆ ಪ್ರವಚನವನ್ನೇ ಉಸಿರಾಗಿಸಿಕೊಂಡ ಪೂಜ್ಯ ಗುರೂಜಿ ಲಿಂಗಾನಂದ ಮಹಾಸ್ವಾಮೀಜಿಯವರಂತೆ ತಾವು ಸಹ ಅವಿರತವಾಗಿ ಹಳ್ಳಿ-ಪಟ್ಟಣವೆನ್ನದೇ ಕಳೆದ ಐವತ್ತು ವರ್ಷಗಳಿಂದ ನಿರಂತರವಾಗಿ ಜನಜಾಗೃತಿ ಮಾಡುತ್ತಿರುವಿರಿ.

ಮಹಿಳಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರಯೋಗಿಣಿ,

ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಬಸವಾದಿ ಶರಣರು ಅಂದು ಸಾರಿದರು ಮತ್ತು ಜಗನ್ಮಾತೆ ಅಕ್ಕಮಹಾದೇವಿಯವರನ್ನು ಅನುಭವ ಮಂಟಪದಲ್ಲಿ ಷಡ್‌ಗಣಾಧೀಶರಲ್ಲಿ ಒಬ್ಬರೆಂದು ಗೌರವ ನೀಡಿದರು. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿ, ಮಹಾದಾಸೋಹಿ ನೀಲಗಂಗಮ್ಮ ತಾಯಿ, ಹೀಗೆ ನೂರಾರು ಶರಣೆಯರು 12 ನೆಯ ಶತಮಾನದಲ್ಲಿ ಆಗಿ ಹೋದರು. ಕಾಲಾನಂತರದಲ್ಲಿ ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆಯರಿಗೆ ಗುರು ಸ್ಥಾನ ಸಿಗಲೇ ಇಲ್ಲ. ಗುರು ಬಸವಣ್ಣನವರ

ಪ್ರೇರಣೆಯಂತೆ ಗುರು ಬಸವಣ್ಣನವರ ಜನ್ಮ ಅಷ್ಟ ಶತಮಾನೋತ್ಸವದ ಸಂದರ್ಭದಲ್ಲಿ ಬಸವಕಲ್ಯಾಣದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಯವರ ಹೆಸರಿನಲ್ಲಿ ಮಹಿಳಾ ಗುರುಪೀಠ ಸ್ಥಾಪಿಸುವುದಾಗಿ ಘೋಷಿಸಿದಿರಿ. ತಮ್ಮ ಸತ್‌ಸಂಕಲ್ಪದಂತೆ ಪೂಜ್ಯ ಲಿಂಗಾನಂದ ಗುರೂಜಿಯವರು ಧಾರವಾಡದಲ್ಲಿ ಪ್ರಪ್ರಥಮ ಮಹಿಳಾ ಗುರು ಪೀಠ ಸ್ಥಾಪಿಸಿ ತಮ್ಮನ್ನು ಪ್ರಥಮ ಮಹಿಳಾ ಪೀಠಾಧ್ಯಕ್ಷರನ್ನಾಗಿ ಮಾಡಿದರು. 1970 ರಲ್ಲಿ ಪ್ರಥಮ ಮಹಿಳಾ ಜಗದ್ಗುರುಗಳಾಗಿ ವಿಶ್ವದ ಎಲ್ಲೆಡೆ ಬಸವ ಧರ್ಮದ ಸೌರಭವನ್ನು ಹರಡುತ್ತಿರುವಿರಿ.

ಧರ್ಮಕ್ರಾಂತಿಯ ಧೀರಯೋಗಿಯಾಗಿ ಪ್ರವಚನ ಪಿತಾಮಹ ಎಂಬ ಬಿರುದು ಪಡೆದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ಶಿಷ್ಯರಾಗಿ ತಾವು 170ಕ್ಕೂ ಅಧಿಕ ಗ್ರಂಥಗಳನ್ನು, ನೂರಾರು ಹಾಡಿನ ಮತ್ತು ಪ್ರವಚನದ ಸಿಡಿ, ಡಿವಿಡಿಗಳನ್ನು ನಿರ್ಮಿಸಿ ಪ್ರಚಾರಗೈದಿದ್ದೀರಿ.

ಶ್ರೀ ಗುರು ಬಸವಣ್ಣನವರ ಐಕ್ಯಕ್ಷೇತ್ರವಾದ ಕೂಡಲ ಸಂಗಮ ಕ್ಷೇತ್ರವನ್ನು ಧರ್ಮಕ್ಷೇತ್ರವೆಂದು ಸಾರಿ 1988 ರಿಂದ ಶರಣ ಮೇಳ ಉತ್ಸವ ಆರಂಭಿಸಿದ್ದೀರಿ. 1992ರಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಸ್ಥಾಪಿಸಿ ಪೂಜ್ಯ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರನ್ನು ಪ್ರಥಮ ಪೀಠಾಧ್ಯಕ್ಷರನ್ನಾಗಿ ಮಾಡಿ ಗುರುಋಣವನ್ನು ತೀರಿಸಿದಿರಿ.

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಗುರೂಜಿಯವರು ಜೂನ್, 30 1995ರಂದು ಕ್ರಿಯಾ ವಿಶ್ರಾಂತಿ ಗೈದರು. 1996 ರ ಜನವರಿ 13 ರಂದು ಲಕ್ಷಾಂತರ ಶರಣರ ಅಪೇಕ್ಷೆಯ ಮೇರೆಗೆ ಶರಣ ಮೇಳದಲ್ಲಿ ತಾವು ತೆರಕ್ತವಾದ ಮಹಾಜಗದ್ಗುರು ಸ್ಥಾನವನ್ನು ಅಲಂಕರಿಸಿ ಎರಡನೇ ಪೀಠಾಧೀಶರಾಗಿ ಅಂದಿನಿಂದ ಇಂದಿನವರೆಗೂ ಲಕ್ಷಾಂತರ ಬಸವ ಭಕ್ತರಿಗೆ ಮಾರ್ಗದರ್ಶನ ಮಾಡುತ್ತ ಧರ್ಮ ದೀಕ್ಷೆಯನ್ನು ನೀಡಿ ಮುನ್ನಡೆಸುತ್ತಿರುವಿರಿ.

2002 ನೇ ವರ್ಷದಲ್ಲಿ ಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿರುವ ಬೀದರ ಜಿಲ್ಲೆಯ ಬಸವ ಕಲ್ಯಾಣದ ಕಡೆ ತಾವು ದಿವ್ಯದೃಷ್ಟಿ ಹರಿಸಿ, ಮೊದಲಿಗೆ 3 ಎಕರೆ ಜಮೀನು ಖರೀದಿಸಿ ಜಗದ್ಗುರು ಅಲ್ಲಮಪ್ರಭು ಶೂನ್ಯ ಪೀಠ ಸ್ಥಾಪಿಸಿ, ಬಸವ ಮಹಾಮನೆಯನ್ನು ನಿರ್ಮಿಸಿ ಕಲ್ಯಾಣ ಪರ್ವ ಎಂಬ ಬೃಹತ್ ಉತ್ಸವವನ್ನು ಪ್ರಾರಂಭಿಸಿದಿರಿ.

ಮೊದಲನೇ ಕಲ್ಯಾಣ ಪರ್ವ ಒಂದು ಐತಿಹಾಸಿಕ ಘಟನೆಯಾಗಿ ಉಳಿದಿದೆ. ತಾವು ಇಡುವ ಪ್ರತಿಹೆಜ್ಜೆ ಐತಿಹಾಸಿಕವೇ ಆಗಿವೆ. ಹಲವಾರು ಎಡರು-ತೊಡರು-ವಿರೋಧಗಳು ಬಂದವು. ಆದರೂ ಎದೆಗೆಡದೆ, 12 ವರ್ಷಗಳಿಂದ ನಿರಂತರವಾಗಿ ಕಲ್ಯಾಣ ಪರ್ವ ನಡೆಸಿಕೊಂಡು ಬಂದಿದ್ದೀರಿ. ಹನ್ನೆರಡನೆಯ ಶತಮಾನದಲ್ಲಿ ಭಕ್ತಿ-ವೈಭವದ ಬೀಡಾಗಿದ್ದ ಕಲ್ಯಾಣ ಹಾಗೂ ಬೀದರ ಜಿಲ್ಲೆ ಈಗ ಹಿಂದುಳಿದ ಜಿಲ್ಲೆಯೆಂಬ ಹಣೆಪಟ್ಟಿ ಹೊಂದಿದೆ. ಆದರೆ ತಾವು ಬಸವ ಧರ್ಮಪೀಠದ ವತಿಯಿಂದ 20 ಎಕರೆ ಜಮೀನು ಖರೀದಿಸಿ ಶರಣ ಶೈಲದ ಮೇಲೆ ವಿಶ್ವಗುರು ಬಸವಣ್ಣನವರ ಜಗತ್ತಿನ ಅತಿ ಎತ್ತರದ 108 ಅಡಿ ಪುತ್ಥಳಿಯನ್ನು ನಿರ್ಮಿಸಿ ಐತಿಹಾಸಿಕ ದಾಖಲೆಯಾಗುವಂತೆ ಮಾಡಿದ್ದೀರಿ. ಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿರುವ ಬಸವ-ಕಲ್ಯಾಣ ಕ್ಷೇತ್ರವನ್ನು ಸಂದರ್ಶಿಸಲು ಎಲ್ಲ ರಾಜ್ಯ, ದೇಶ-ವಿದೇಶಗಳಿಂದ ಪ್ರವಾಸಿಗರು ಬರುವಂತೆ ಮಾಡಿದ್ದೀರಿ. ನೆಲಮಟ್ಟದಿಂದ 50 ಅಡಿ ಎತ್ತರದ ಶರಣ ಶೈಲ, 24 ಅಡಿ ಎತ್ತರದ ಎರಡಂತಸ್ತಿನ ಪೀಠದ ಮೇಲೆ 108 ಅಡಿ ಎತ್ತರದ ಕುಳಿತ ಅಭಯಹಸ್ತದ ಗುರು ಬಸವಣ್ಣನವರ ಪುತ್ಥಳಿಯು ದಿನ ನಿತ್ಯವೂ ಸಹಸ್ರಾರು ಭಕ್ತರನ್ನು, ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತಿದೆ. ವಿರಾಟ ಸ್ವರೂಪದ ಗುರು ಬಸವಣ್ಣನವರ ಮೂರ್ತಿಯ ಮುಂದೆ ಬಂದು ನಿಂತು ದಿಟ್ಟಿಸಿ ನೋಡಿದಾಗ ಎಂಥ

Digitalized by e-Sahithya Documentation Forum
Sponsored by Sarayu Foundation Trust

ನಾಸ್ತಿಕನ ಹೃದಯವೂ ಸಹ ಕರಗಿ ಭಕ್ತಿಯ ಚಿಲುಮೆ ಉಕ್ಕಿ ಹರಿಯುವಂತಿದೆ. ತಾವು ನಿರ್ಮಿಸಿರುವ ಶ್ರೀ ಬಸವೇಶ್ವರ ಗವಿ, ವೈರಾಗ್ಯನಿಧಿ ಅಕ್ಕಮಹಾದೇವಿ ಗವಿ, ಹುತಾತ್ಮ ಚೇತನ ಹರಳಯ್ಯ ಚಿಲುಮೆ ಮತ್ತು ಶರಣ ಗ್ರಾಮ ಅದ್ಭುತವಾಗಿವೆ. ಒಬ್ಬೊಬ್ಬ ಶರಣರ ಮೂರ್ತಿಗಳೂ ಜೀವಂತವಾಗಿವೆ. ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರ ಸೇವೆಯಂತೂ ಮರೆಯುವಂತಿಲ್ಲ.

ಗುರು ಬಸವಣ್ಣನವರ ಆತ್ಮವೇ ತಾವಾಗಿ ಬಸವಾತ್ಮಜೆ ಎಂಬ ಅಭಿಧಾನವ ಹೊಂದಿದ್ದೀರಿ. ಜಗತ್ತಿನಲ್ಲಿಯೇ ಅತೀ ಎತ್ತರದ ಗುರು ಬಸವ ಪುತ್ಥಳಿಯನ್ನು ನಿರ್ಮಿಸಿ ಜಗದ್ವಂದ್ಯರಾಗಿದ್ದೀರಿ. ದೇಶದ ಎಲ್ಲೆಡೆ ತಾವು ಬಸವ ಧರ್ಮ ಪೀಠದ ಶಾಖೆಗಳನ್ನು ತೆರೆದು ಬಸವ ಧರ್ಮದ ಪ್ರಸಾರ ಮಾಡುತ್ತಿದ್ದೀರಿ. ಆದರೂ ಸಹ 108 ಅಡಿ ಬಸವ ಪುತ್ಥಳಿಯನ್ನು ನಿರ್ಮಿಸಲು ಬೀದರ ಜಿಲ್ಲೆಯ ಬಸವ ಕಲ್ಯಾಣವನ್ನೇ ಆಯ್ಕೆ ಮಾಡಿಕೊಂಡಿರುವುದು ನಮ್ಮ ಸೌಭಾಗ್ಯವೇ ಸರಿ.

ಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿರುವ ಬಸವಕಲ್ಯಾಣವನ್ನು ಅಂತರರಾಷ್ಟ್ರೀಯ ಕ್ಷೇತ್ರವನ್ನಾಗಿ ರೂಪಿಸುತ್ತಿರುವ ತಮಗೆ ಬೀದರ ಜಿಲ್ಲೆಯ ಜನತೆ ಹಾಗೂ ಸರ್ವ ಬಸವ ಭಕ್ತರ ಪತಿಯಿಂದ ಅಭಿನಂದಿಸಬೇಕೆಂದು ಯೋಚಿಸಿ ವಿವಿಧ ಸಂಘಟನೆಗಳು-ಸಮಾಜಗಳ ಪ್ರಮುಖರು ಸೇರಿ ಅಭಿನಂದನಾ ಸಮಿತಿಯನ್ನು ರಚಿಸಿಕೊಂಡು ತಮ್ಮನ್ನು ಹೃದಯ-ಪೂರ್ವಕವಾಗಿ ಅಭಿನಂದಿಸುತ್ತಿದ್ದೇವೆ.

ಸೃಷ್ಟಿಕರ್ತ ಪರಮಾತ್ಮ ಹಾಗೂ ಧರ್ಮಗುರು ಬಸವಣ್ಣನವರ ದಿವ್ಯಾನುಗ್ರಹ ತಮ್ಮ ಮೇಲೆ ಸದಾ ಇದ್ದು, ಇನ್ನೂ ಹೆಚ್ಚು ಆಯುಷ್ಯ, ಆರೋಗ್ಯ ಕರುಣಿಸಲಿ. ಇನ್ನೂ ನೂರಾರು ವರುಷ ಬಾಳಿ ನಮಗೆಲ್ಲಾ ಮಾರ್ಗದರ್ಶನ ಮಾಡುವಂತಾಗಲಿ ಎಂದು ಶ್ರೀ ಗುರು ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇವೆ.

ತಮ್ಮ ಪಾದಕ್ಕೆ ಅನಂತ ಕೋಟಿ ಶರಣು ಶರಣಾರ್ಥಿಗಳು

ಇಂತಿ ತಮ್ಮ

ಅಭಿನಂದನಾ ಸಮಿತಿ, ಬೀದರ

ಧಾರವಾಡದ ಅಕ್ಕಮಹಾದೇವಿ ಮಠದಲ್ಲಿ ಶರಣೋತ್ಸವ

2013ರ ಏಪ್ರಿಲ್ 27,28 ಮತ್ತು 29ರಂದು

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವು ಸ್ಥಾಪನೆಯಾದುದು 1970ರಲ್ಲಿ. ಅಂದಿನಿಂದಲೂ ಅದು ಧಾರ್ಮಿಕ ಜಗತ್ತಿನಲ್ಲಿ ಪ್ರಥಮ ಮಹಿಳಾ ಜಗದ್ಗುರು ಪೀಠವೆಂಬ ಖ್ಯಾತಿ ಹೊಂದಿದೆ. ಶರಣರೆಲ್ಲರ ಒತ್ತಾಸೆಯಂತೆ ಪ್ರತಿವರ್ಷವೂ ಶರಣೋತ್ಸವ ಎಂಬ 3 ದಿವಸಗಳ ಕಾರ್ಯಕ್ರಮವನ್ನು ಏಪ್ರಿಲ್ ತಿಂಗಳಿನಲ್ಲಿ ನಡೆಸಲಾಗುತ್ತಿದೆ. 2013ನೇ ಸಾಲಿನ ಶರಣೋತ್ಸವವು ಏಪ್ರಿಲ್ 27, 28 ಮತ್ತು 29ರಂದು ನಡೆಯಲಿದೆ. ಶರಣ(ಶನಿ)ವಾರ ದಿ.27ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನಾ ಕಾರ್ಯಕ್ರಮ; ಸಂಜೆ-ಧರ್ಮ ಚಿಂತನಗೋಷ್ಠಿ, ದೇವ(ಭಾನು)ವಾರ ದಿ.28ರಂದು ಬೆಳಿಗ್ಗೆ 11ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ-ಮಹಿಳಾ ಗೋಷ್ಠಿ, ಶಿವ(ಸೋಮ)ವಾರ ದಿ.29 ರಂದು ಬೆಳಿಗ್ಗೆ 10-30ರಿಂದ ಸಮಾರೋಪ ಸಮಾರಂಭ, ಮಧ್ಯಾಹ್ನದ ಪ್ರಸಾದದ ನಂತರ ಧಾರವಾಡ ನಗರದಲ್ಲಿ ಮೆರವಣಿಗೆ. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ನೇತೃತ್ವದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಳ್ಳಬೇಕೆಂದು ವಿನಂತಿಸುತ್ತೇನೆ.

ಶರಣ. ಸಿದ್ಧಣ್ಣ ನಟೇಗಲ್, ಅಧ್ಯಕ್ಷರು, ರಾ.ಬ.ದಳ, ಧಾರವಾಡ

ಶರಣರ ಸತ್ಸಂಕಲ್ಪವೇ ಪೂಜ್ಯ ಮಾತಾಜಿ.

ಲಿಂಗದೇವನು ನಿರವಯನಾದರೆ, ಗುರು ಬಸವಣ್ಣನವರು ಅವಯವದಿಂದ ದಿವ್ಯದರ್ಶನವೀಯುತ್ತಿರಲು, 12ನೇ ಶತಮಾನದ ಶರಣರ ಹೆಜ್ಜೆ ಹೆಜ್ಜೆಗಳು ಸಾಕಾರವಾಗಿ ಮೂರ್ತಿಗೊಂಡು 21ನೇ ಶತಮಾನದಲ್ಲಿ ಕಾಣಬರುತ್ತಿರುವ ದಿವ್ಯತೇಜೋಮಯ ಮೂರ್ತಿಯೇ ಪೂಜ್ಯ ಮಾತಾಜಿಯವರು.

"ವಿಶ್ವಗುರು ಬಸವಣ್ಣನವರ ಭಕ್ತಿ, ಜಗಜ್ಜಂಗಮ ಅಲ್ಲಮ ಪ್ರಭುದೇವರ ಗಾಂಭೀರ್ಯ, ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಜ್ಞಾನ, ಜಗನ್ಮಾತೆ ಅಕ್ಕಮಹಾದೇವಿ ತಾಯಿಯವರ ವೈರಾಗ್ಯ, ಬಸವಯೋಗಿ ಸಿದ್ಧರಾಮೇಶ್ವರರ ಕಾರ್ಯಶೀಲತೆ, ದಾಸೋಹಿ ನೀಲಾಂಬಿಕೆಯವರ ವಿಚಾರ ಪ್ರಜ್ಞೆ," .....ಒಂದೇ ಎರಡೇ ಚಿಂತನೆ ಮಾಡುತ್ತಾ ಕುಳಿತರೆ ಪೂಜ್ಯರ ಅಂಗ ಅಂಗಗಳೆಲ್ಲವೂ ನರ ನಾಡಿಗಳಲ್ಲಿಯೂ ರಕ್ತದ ಕಣ ಕಣಗಳಲ್ಲಿಯೂ 770 ಅಮರಗಣಂಗಳ ಶಕ್ತಿ ತುಂಬಿದೆಯೋ ಅಥವಾ ಅವರೆಲ್ಲರೂ ಪೂಜ್ಯ ಮಾತಾಜಿಯವರಲ್ಲಿ ಅವತೀರ್ಣಗೊಂಡಿರುವರೋ ಎಂಬ ಸಂದೇಹ ಒಡಮೂಡುವುದು.

"ಏರಲಾರೆವು ತಂದೆ ನಿನ್ನೆತ್ತರಕ್ಕೆ" ಕವಿವಾಣಿಯಂತೆ, ವಿಶ್ವಕ್ಕೆ ಪ್ರಸಿದ್ಧವಾದ ಬಾನೆತ್ತರಕ್ಕೆ ಏರಿ ನಿಂತ 108 ಅಡಿ ಬಸವ ಪುತ್ಥಳಿ ಅನಾವರಣದ ನಂತರವಂತೂ ಪೂಜ್ಯರನ್ನು ಬಾಹ್ಯ ಚಕ್ಷುಗಳಿಂದ ದರ್ಶನ ಮಾಡುತ್ತಿರಲು ದಿವ್ಯಯೋಗಿಣಿಯೇ ಕಣ್ಮುಂದೆ ಕಾಣುವಂತೆ ಮೈ ರೋಮಾಂಚನವಾಗಿ ಕ್ಷಣಕಾಲ ವಿದ್ಯುತ್ಸಂಚಯವಾಗುವುದು. ಇನ್ನು ಪೂಜ್ಯರ ಮನಸ್ಸು ಯಾರಿಗೂ ಅರ್ಥವಾಗದಂತಹ, ಭೂಮಂಡಲವನ್ನೇ ವ್ಯಾಪಿಸಿರುವ ಅಪೂರ್ವ ಬೃಹತ್‌ಶಕ್ತಿ ತುಂಬಿದೆ ಎನಿಸುತ್ತದೆ.

ಅಪೂರ್ವ ಆತ್ಮಶಕ್ತಿಯಿಂದ ಕೂಡಿರುವ, ಮುಗುಳ್ನಗುತ್ತಾ ಭಕ್ತರಿಗೆ ದಿವ್ಯ ದರ್ಶನ-ವನ್ನೀಯುತ್ತಾ ಸಮಸ್ತ ಜನ ಸಮೂಹವನ್ನು ಸುಧಾರಿಸುತ್ತಾ ಅದ್ಭುತ ಕಾರ್ಯಗಳನ್ನು ಮಾಡುತ್ತಿರುವವರೇ ನಮ್ಮ ಪೂಜ್ಯ ಬಸವಾತ್ಮಜೆಯವರು.

ಸುಮ್ನೆ ಏನ್ರಿ ! ಇಷ್ಟೆಲ್ಲಾ ಕೆಲಸ ಆಗಿದೆ ಅಂದರೆ ಹುಡುಗಾಟವಾ....? ಸರ್ಕಾರದ ಬಿಡಿ ಕಾಸಿನ ಸಹಾಯವಿಲ್ಲದೆ ಒಂದಲ್ಲ, ಎರಡಲ್ಲ 26 ಶರಣ ಮೇಳಗಳನ್ನು, ಬೆಳ್ಳಿ ಹಬ್ಬದೊಡನೆ ಅನ್ನದಾಸೋಹ ಜ್ಞಾನದಾಸೋಹಗಳನ್ನು ಶಿಸ್ತು ಸಂಯಮದಿಂದ ನಡೆಸೋದು ಇನ್ನಾರಿಗೆ ಸಾಧ್ಯ. ಲಿಂಗಾಯತ ಗಣಮೇಳಗಳು ಕರ್ನಾಟಕವಲ್ಲದೆ ದಕ್ಷಿಣ ಭಾರತ ರಾಜ್ಯಗಳಲ್ಲದೆ ಮುಂಬೈ ನಗರದಲ್ಲಿಯೂ, ಭಾರತದ ರಾಜಧಾನಿ ದೆಹಲಿಯಲ್ಲಿ ಎರಡು ಭಾರಿ ಭವ್ಯ ಸಮ್ಮೇಳನಗಳನ್ನು ನಡೆಸಿರುವುದು ನೆನೆದರೆ, ಈ ಯಶಸ್ಸು ಬಸವಾತ್ಮಜೆಯವರಿಗೆ ಸಾಧ್ಯವೇ ಹೊರತು ಮತ್ತಾರಿಗಿಲ್ಲ.

"ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಅಪ್ಪನವರ ವಾಣಿಗೆ ಒತ್ತುಕೊಟ್ಟು ಸುಮಾರು 400ಕ್ಕೂ ಹೆಚ್ಚು ಅನಾಥ ಮಕ್ಕಳನ್ನು ಆಹಾರ, ಉಡುಪು, ವಸತಿ, ವಿದ್ಯೆ, ಧರ್ಮ ಕೊಟ್ಟು ಸಮರ್ಪಕವಾಗಿ ಇಂಬಿಟ್ಟುಕೊಂಡಿದ್ದಾರೆಂದರೆ ಎಲ್ಲರೂ ಅಭಿಮಾನ ಪಡುವಂತಾಗಿದೆ. ಕೂಡಲಸಂಗಮ, ಧಾರವಾಡ, ಬೆಂಗಳೂರು, ಬಸವಕಲ್ಯಾಣ, ಅಲ್ಲಮಗಿರಿಗಳಲ್ಲಿ ಪೀಠಗಳನ್ನು ಸ್ಥಾಪಿಸಿ ಜಂಗಮ ಸ್ವರೂಪಿಗಳಾಗಿದ್ದಾರೆ. ಅಷ್ಟೇ ಮಾತ್ರ ಸ್ವರೂಪರಾಗಿ ಪ್ರೌಢ ಜಂಗಮ-ಮೂರ್ತಿಗಳನ್ನು ಪಡೆದಿರುವುದು ಶ್ಲಾಘನೀಯವಾಗಿದೆ.

ಲಿಂಗವ ನೋಡುವ ಅಣ್ಣಗಳಿರಾ
ಜಂಗಮವ ನೋಡಿರೇ........

ಅಪ್ಪ ಬಸವಣ್ಣನವರ ಸಂದೇಶವಾಣಿ ಪೂಜ್ಯ ಮಾತಾಜಿಯವರಲ್ಲಿ ಸಾಕ್ಷಾತ್ಕಾರವಾಗಿದೆ. ಲಕ್ಷ ಲಕ್ಷ ಜನ ಸಮೂಹವನ್ನು ಹಗ್ಗವಿಲ್ಲದೆ ಕಟ್ಟಿ ಹಾಕಿರುವ ಮೋಡಿ, ಮೂಕವಿಸ್ಮಿತರಾಗಿ

Digitalized by e-Sahithya Documentation Forum
Sponsored by Sarayu Foundation Trust

ವಾಣಿಯನ್ನು ಆಲಿಸುವ ಅಸಂಖ್ಯಾತ ಭಕ್ತಸಾಗರವನ್ನು ಹೊಂದಿರುವ ಬಸವಾತ್ಮಜೆಯವರೇ.... ಏನು ತಾಯೇ...... ನಿಮ್ಮ ಕೈಚಳಕ........ ಧ್ವನಿ ಪುಳಕ........ ಬಸವ ತಂದೆಯೇ....... ಶ್ರೀರಕ್ಷಕ,

ಸಚ್ಚಿದಾನಂದ ಪ್ರಿಯೆಯವರ ಮನೋಜ್ಞ ವಿಚಾರಗಳನ್ನು ಮರೆಯುವುದುಂಟೆ....? ದಿನದ 24 ಗಂಟೆಗಳು ಹೇಗೆ ಸಾಕಾಗುತ್ತವೆಯೋ ಊಹಿಸಲಾರೆವು. ಸಾಹಿತ್ಯ ಲೇಖನ ಗೀತ ರಚನೆಗಳು, ರಾಗ ಸಂಯೋಜನೆ, ಧ್ವನಿ ಮುದ್ರಣ ಕಾರ್ಯ-ಹೀಗೆ ಹತ್ತು ಹಲವಾರು ಕಾರ್ಯಗಳು.

ವಿಶ್ವಕಲ್ಯಾಣ ಮಿಷನ್‌ನಂಥ ಸಂಸ್ಥೆಯನ್ನು ಸ್ಥಾಪಿಸಿ ಧಾರ್ಮಿಕ ವಿಚಾರಗಳನ್ನು ಭಕ್ತರ ಮನೆಯಂಗಳಕ್ಕೆ ಮುಟ್ಟಿಸುವಂತಹ 'ಕಲ್ಯಾಣ ಕಿರಣ' ಮಾಸಪತ್ರಿಕೆಯ ಮಾಧ್ಯಮದಿಂದ ಶರಣ ಬಂಧುಗಳು ಅವಿರಳ ಸಂಬಂಧ ಹೊಂದಿರುವುದು ಇಂದು ಯಾವ ವಿರಕ್ತರಲ್ಲಿದೆ ?

'ತರಂಗಿಣಿ'ಯಂತೂ ಅಕ್ಕಮಹಾದೇವಿ ತಾಯಿಯವರ ನೈಜಚಿತ್ರಣ. 'ಹೆಪ್ಪಿಟ್ಟ ಹಾಲು' ಮನ ಮಿಡಿಯುವ ಕಾದಂಬರಿ, ಗುರುಬಸವಣ್ಣನವರು ಪರಮಾತ್ಮನಿಗೆ ಹೆಸರಿಟ್ಟು ವಿಶ್ವಗುರುವಾದರೆ, ಆ ಹೆಸರನ್ನು ವಚನಗಳ ಗಣಿಯಿಂದ ಹೊರತೆಗೆದು 'ಲಿಂಗದೇವ'ನನ್ನು ಪ್ರಕಾಶಿಸಿದ, 'ಲಿಂಗದೇವಾ' ಅಂಕಿತವನ್ನು ವಿಜೃಂಭಿಸಿದ ಕೀರ್ತಿಯೂ ಗಿನ್ನೀಸ್ ದಾಖಲೆಗೂ ಕಡಿಮೆಯೇ ಆಗುತ್ತದೆ.

ಒಬ್ಬ ಸಾಧಕನ ಕೈಯಲ್ಲಿ ಒಳ್ಳೆ ರಸಪುರಿ ಮಾವಿನಹಣ್ಣನ್ನು ಕೊಟ್ಟು ಈ ಪ್ರಸಾದವನ್ನು ಯಾವ ಕಡೆಯಿಂದ ಸ್ವೀಕರಿಸುತ್ತೀರಾ ? ಎಂದರೆ ಅವರು ಸುತ್ತಲೂ ಹಣ್ಣನ್ನು ನೋಡಿ ಅದೇ ಪ್ರಶ್ನೆಯನ್ನು ಹಾಕಬಹುದು ! ಹಾಗೆ ನಮ್ಮ "ಮಾತಾಜಿ" ಅವರ ವಿಚಾರಧಾರೆಗಳನ್ನು ಯಾವುದರಿಂದ ಪ್ರಾರಂಭಿಸಬೇಕು ಎಂದಾಗ ಆ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಭಾವನಾತ್ಮಕವಾಗಿ ಒಂದು ತುಲಾಭಾರ ಏರ್ಪಡಿಸಿ ಜಗತ್ತಿನಲ್ಲಿ ಈಗಿರುವ ಎಲ್ಲ ಪೂಜ್ಯ ಗುರುವರ್ಗದವರನ್ನು ಒಂದು ಭಾಗದಲ್ಲಿ ಅಲಂಕರಿಸಲು, ಪೂಜ್ಯ ಮಾತಾಜಿಯವರನ್ನು ಮತ್ತೊಂದು ಭಾಗದಲ್ಲಿ ಅಲಂಕರಿಸಲು ಕಲ್ಪಿಸಿಕೊಂಡರೆ ಮಾತಾಜಿಯವರನ್ನು ಹೊಂದಿದ ಭಾಗ ಬಹುಭಾರದಿಂದ ತೂಗುವುದು ಖಚಿತ.

ಇದೇ ಅಲ್ಲವೇ.......... ಸಮಾಜದ ಕಳಕಳಿ ! 108 ಅಡಿ ಬಸವ ಪುತ್ಥಳಿಯಿಂದ ಹಿಡಿದು, ನಂತರ 111 ಅಡಿ ಬಸವ ಪುತ್ಥಳಿಯ ನಿರ್ಮಾಣ ಹಾಗೂ 63 ಅಡಿ ಪೂಜ್ಯ ಅಪ್ಪಾಜಿಯವರ ನಿರ್ಮಾಣ ಜೊತೆಗೆ ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ..... ಇಂತಹ ಬೃಹತ್ ಬಹು ಜವಾಬ್ದಾರಿಯುತವಾದ ಪುತ್ಥಳಿ ಯೋಜನೆಗಳನ್ನು ಹಾಕಿಕೊಂಡು ಯಶಸ್ವಿ ಯಾಗುವವರು....... ಮತ್ತಾರು.....? ಮತ್ತಾರು......? ಮತ್ತಾರು.......? ಇವರಲ್ಲವೆ ನಮ್ಮ ಮಾತಾಜಿಯವರು ! ಇವರಲ್ಲವೆ ನಮ್ಮ ಬಸವಾತ್ಮಜೆಯವರು !! ಇವರಲ್ಲವೆ ನಮ್ಮ ಬಸವ ಕಾಯಕ ರತ್ನರವರು !!! ಇವರಲ್ಲವೆ ನಮ್ಮ ಸಚ್ಚಿದಾನಂದ ಪ್ರಿಯೆಯವರು !!!! ಇವರಲ್ಲವೆ ನಮ್ಮ ಶರಣರ ಸತ್ಸಂಕಲ್ಪ ಮೂರ್ತಿಯವರು !!!!! 12ನೆಯ ಶತಮಾನವನ್ನು ಚಾಚೂ ತಪ್ಪದೆ 21ನೇ ಶತಮಾನಕ್ಕೆ ಭಟ್ಟಿ ಇಳಿಸಿರುವವರು ! ಹೀಗೆ ಪೂಜ್ಯ ಮಾತಾಜಿಯವರ ಕಾರ್ಯ ವೈಖರಿಯಷ್ಟೆ ಶರಣರ ಸಂಕಲ್ಪವಲ್ಲ. ಇಳೆಗೆ ಅವರ ಆಗಮನದಿಂದ ಹಿಡಿದು ಇಂದಿನವರೆಗೂ, ಎಂದೆಂದಿನವರೆಗೂ ಸಹ ಶರಣರ ಸತ್ಸಂಕಲ್ಪವೇ ಪೂಜ್ಯ ಮಾತಾಜಿಯವರು.

ದೇವಾ, ಲಿಂಗದೇವಾ ಸೃಷ್ಟಿಕರ್ತನೆ ಹಾಗೂ ಗುರುದೇವಾ ಬಸವ ತಂದೆಯೇ, ಇಂತಹ ನಮ್ಮ ಮಾತಾಜಿಯವರಿಗೆ ಹೆಚ್ಚಿನ ಅತಿಹೆಚ್ಚಿನ ಆಯುರಾರೋಗ್ಯ ಸಂಕಲ್ಪಕಾರ್ಯಸಿದ್ಧಿ, ಯೋಜನಾ ಯಶಸ್ಸುಗಳಾಗುವಂತೆ ಹರಸಿರಿ ಎಂದು ಹೃದಯಾಂತರಾಳದಿಂದ ಬೇಡಿಕೊಳ್ಳುವೆ ಮಾತೆಯವರ ಶ್ರೀ ಚರಣಗಳಲ್ಲಿ ಶರಣು-ಶರಣಾರ್ಥಿಗಳು.

ಶರಣ ವೃಂದದ ಪರವಾಗಿ
ಶರಣೆ. ಶಾಂತಮ್ಮ
ರಾಷ್ಟ್ರೀಯ ಬಸವ ದಳ, ಶಿವಮೊಗ್ಗ

ಗುರು ಬಸವಣ್ಣನವರು ಕಟೆದ ಅಪ್ರತಿಮ ಪುತ್ಥಳಿ-ಮಾತಾಜಿ

ಗುರುಬಸವಣ್ಣ ಕಟೆದ ಅಪ್ರತಿಮ ಪುತ್ಥಳಿ ನೀವು ಗುರು ಮಾತಾಜಿ
ಅದಕ್ಕೇ ತುಂಬಿರಬೇಕು ಆ ಬಸವ ತಂದೆಯು ಸರ್ವತೋಮುಖ ಪ್ರತಿಭೆ
ಬಸವ ಧರ್ಮಕ್ಕಾಗಿ ನಿಮ್ಮಷ್ಟು ಮಿಡಿಯುವವರು,
ದುಡಿಯುವವರು ಇನ್ನಿಲ್ಲವೇನೋ !
ಬಸವಾಂಬುಧಿಯೊಳು ತೇಲಾಡುವ ಅಪ್ರತಿಮ ಚತುರೆ ನೀವು
ನಿಮ್ಮ ರಕ್ತದ ಕಣ ಕಣದಲ್ಲೂ ಚಿಮ್ಮುತ್ತಿದೆ ಬಸವಾಕ್ಷರ ತ್ರಯಗಳು
ಬಸವ ಶಕ್ತಿಯ ಮೈಗೂಡಿಸಿಕೊಂಡು ಬಸವಾತ್ಮಜೆಯಾಗಿಹಿರಿ
ಕರುಣಾಮೂರ್ತಿ ಬಸವನ ಕರುಣೆಯ ಕಂದ ನೀವು
ಆ ಕರುಣಾನಿಧಿಯ ಬದುಕನ್ನು ತಮ್ಮ ಬದುಕಿನಲ್ಲಿ
ಅಳವಡಿಸಿಕೊಂಡು ಕರುಣೆಯ ಕಿರಣವಾಗಿಹಿರಿ
ಜಗದ ಉದ್ಧಾರಕ್ಕಾಗಿ ಜೀವನ ಮುಡಿಪಾಗಿಟ್ಟಿಹಿರಿ
ಲೌಕಿಕ ತಂದೆಯ ಆಶಯವ ಬಿಟ್ಟು
ಗುರು ಬಸವ ತಂದೆಯ ಆಶಯದಂತೆ ಭವರೋಗ ವೈದ್ಯರಾಗಿಹಿರಿ
ಹಸಿವು ತೃಷೆ ನಿದ್ರೆಗಳ ಜೈಸಿಹಿರಿ
ಬಸವನಾಮದಿಂ ಆತ್ಮದ ಹಸಿವೆ ಹಿಂಗಿಸಿಕೊಂಡು ಬಸವ ಶಕ್ತಿಯ ಪಡೆದು
ಆ ಶಕ್ತಿಯನೆಲ್ಲವ ಹಸಿದ ಶರಣ ಸಂಕುಲಕೆರೆದು
ಸದೃಢ ಬಸವ ಕುಡಿಗಳ ಸಲಹಿದಿರಿ
ವಚನಾಮೃತದಿಂ ತಮ್ಮ ಆತ್ಮತೃಷೆಯ ನೀಗಿಸಿಕೊಂಡು
ಸಕಲ ಜೀವಾತ್ಮರ ಲೇಸನೇ ಬಯಸುವ ನೀವು
ಭವಾರಣ್ಯದ ಬೇಗೆಯಲ್ಲಿ ಬೆಂದು ಬಾಯಾರಿದ ಜೀವಿಗಳಿಗೆ
ಜ್ಞಾನಗಂಗೆಯ ತೆರದಿ ವಚನಾಮೃತದ ಧಾರೆಯನೆರೆದು
ಸಶಕ್ತ ಶರಣರ ಮಾಡಿಹಿರಿ
ನೊಂದವರಿಗೆ ನಂದಾದೀಪವಾಗಿಹಿರಿ
ಬೆಂದವರಿಗೆ ಭಾಗ್ಯದೇವತೆಯಾಗಿಹಿರಿ
ದಿಕ್ಕಿಲ್ಲದವರಿಗೆ ಆಶ್ರಯದಾತೆಯಾಗಿಹಿರಿ
ಲಿಂಗ ಪೂಜೆಯ ಜೊತೆ ಜಂಗಮ ಸೇವೆಯ ಮಾಡಿಹಿರಿ
ಜಾತಿ ವರ್ಣ ವರ್ಗ ಲಿಂಗ ಭೇದ ಕಳೆಯಲು
ನೀವು ಇಷ್ಟಲಿಂಗ ದೀಕ್ಷೆಯನಿತ್ತು
ಸರ್ವ ಸಮಾನತೆಯ ತತ್ತ್ವ ಬಿತ್ತಿಹಿರಿ
ಧರ್ಮದ ಕಡೆ ಜನ ಬರದಿದ್ದಾಗ
ಧರ್ಮವನ್ನೇ ಮನೆ ಮನೆಯ ಬಾಗಿಲಿಗೆ ತಲುಪಿಸಲು
ಧರ್ಮ ಪ್ರಚಾರದ ಕಾರ್ಯಕ್ರಮವ ನಿರೂಪಿಸಿ
ಪಟ್ಟಣಕ್ಕೆ ಪಂಚರಾತ್ರಿಯಂತೆ ಹಳ್ಳಿಗಳಿಗೆ

Digitalized by e-Sahithya Documentation Forum
Sponsored by Sarayu Foundation Trust

ಏಕರಾತ್ರಿಯಂತೆ ಚರ ಜಂಗಮರಾಗಿ ಚರಿಸುತ್ತಾ
ಲಕ್ಷ ಲಕ್ಷಗಟ್ಟಲೆ ಶರಣ ಸಂಕುಲವ ಮಾಡಿಹಿರಿ
ಕುಗ್ರಾಮವಾಗಿದ್ದ ಕೂಡಲಸಂಗಮವ
ಗುರು ಬಸವಣ್ಣನವರ ಐಕ್ಯಕ್ಷೇತ್ರ ಧರ್ಮ ಭೂಮಿ
ತಪೋ ಭೂಮಿ ಎಂದು ಗುರುತಿಸಿ
ಶರಣ ಮೇಳವೆಂಬ ಬೃಹತ್ ಸಮ್ಮೇಳನಗಳ ನಡೆಸಿ ವಿಶ್ವವಿಖ್ಯಾತ ಮಾಡಿಹಿರಿ
ಗುರು ಬಸವಣ್ಣನವರ ಕಾರ್ಯಕ್ಷೇತ್ರ
ಬಸವ ಕಲ್ಯಾಣವ ಶರಣಭೂಮಿಯೆಂದು ಗುರುತಿಸಿ
ಕಲ್ಯಾಣ ಪರ್ವವೆಂಬ ಅಪೂರ್ವ ಸಮ್ಮೇಳನ ಮಾಡುವ ಕೆಲಸ ಕೈಗೊಂಡಾಗ
ಕೆಲವರ ವಿರೋಧ, ಪೋಲೀಸರ ಸರ್ಪಗಾವಲಿದ್ದರೂ
ವೀರ ಯೋಗಿಣಿಯಂತೆ ಬಸವ ರಕ್ಷೆಯ ಹೊದ್ದು
ಇಟ್ಟ ಹೆಜ್ಜೆ ಹಿಂತೆಗೆಯದೆ ಹೋರಾಟ ಮಾಡಿ
ಕಲ್ಯಾಣ ಪರ್ವವ ನಡೆಸಿ ಕ್ರಾಂತಿಯೋಗಿಣಿಯಾಗಿಹಿರಿ
ಜಗತ್ ಪ್ರಸಿದ್ಧ 108ಅಡಿ ಗುರುಬಸವ ಪುತ್ಥಳಿಯ
ನಿರ್ಮಿಸಿ ಲೋಕಾರ್ಪಣೆಗೈದಿಹಿರಿ
ಸಾಹಿತ್ಯವಾಹಿನಿಯಾಗಿಹಿರಿ, ಸತ್ಯಾನ್ವೇಷಕಿಯಾಗಿಹಿರಿ
ಪ್ರವಚನಪಟುವಾಗಿಹಿರಿ, ಗಾನ ಕೋಗಿಲೆಯಾಗಿಹಿರಿ
ಓಹ್ ! ಎನ್ನ ಜನ್ಮ ಜನ್ಮಾಂತರದ ಪುಣ್ಯದ ಫಲವೆ
ಎನ್ನ ಗುರು ಬಸವಾತ್ಮಜೆ ಮಾತೆಯೆ ನಿಮ್ಮನ್ನು ಹೇಗೆಂದು ವರ್ಣಿಸಲಿ ?
ಭಕ್ತಿಯಲ್ಲಿ ಬಸವ ತಂದೆಯ ಮಗಳು
ವೈರಾಗ್ಯದ ದೃಷ್ಟಿಯಲ್ಲಿ ಅಕ್ಕನ ನಿಲುವು
ಪ್ರಭುವಿನ ದೃಷ್ಟಿಯಲ್ಲಿ ಚೊಕ್ಕ ಚಿನ್ನವು ನೀವು
ಚನ್ನ ಬಸವಣ್ಣನವರ ಷಟಸ್ಥಲ ಜ್ಞಾನವಂ
ಧಾರೆಯೆರೆಸಿಕೊಂಡ ಷಟ್‌ಸ್ಥಲಜ್ಞಾನಿ ನೀವು
ಅಕ್ಕನಾಗಲಾಂಬಿಕಾ ತಾಯಿಯವರ
ತತ್ತ್ವ ನಿಷ್ಠೆಯಿಂ ದುಡಿಯುವ ತ್ಯಾಗಜೀವಿ ನೀವು
ಮಾಚಿದೇವರ ಗಣಾಚಾರ ಪ್ರಸಾದವಂ ಕೈಗೊಂಡ ವೀರಗಣಾಚಾರಿ ನೀವು
ಮಡಿವಾಳನಂತೆ ಮಡಿಯನು ಮಾಡುವ
ಅರಿವನು ನೀಡುವ ಗುರು ನೀವು
ಸಚ್ಚಿದಾನಂದ ಪ್ರಿಯೆ ಮಾತಾಜಿ ಗುರುವೆ
ನೀವು ಧರೆಗಿಳಿದ ದಿನವೇ ಶುಭ ದಿನ
ಎಮ್ಮ ಬಾಳಿಗೆ ಮಂಗಳ ತುಂಬಿದ ದಿನ
ಶರಣು ಶರಣಾರ್ಥಿ ತಾಯೆ, ನಿಮ್ಮ ಚರಣಾರವಿಂದಗಳಿಗೆ
ಕೋಟಿ ಕೋಟಿ ನಮನಗಳು.

ಶಾರದಾ ಬಸವರಾಜ್, ರಾ.ಬ.ದಳ, ಭದ್ರಾವತಿ

ಶರಣ. ಅರವಿಂದ ಜತ್ತಿಯವರಿಗೊಂದು
ಶರಣ ಕೆ. ಬಸವರಾಜ ಅವರ ಬಹಿರಂಗ ಪತ್ರ

ಸನ್ಮಾನ್ಯ ಶರಣರಾದ ಅರವಿಂದ ಜತ್ತಿಯವರಿಗೆ ಶರಣು ಶರಣಾರ್ಥಿಗಳು.

ಸೃಷ್ಟಿಗೊಡೆಯ ಲಿಂಗದೇವ, ಧರ್ಮಗುರು ಬಸವಣ್ಣನವರ ಕೃಪೆಯಿಂದ ನಾನು ಕ್ಷೇಮ, ತಾವೆಲ್ಲರೂ ಕ್ಷೇಮವೆಂದು ನಂಬಿದ್ದೇನೆ.

ಮೊನ್ನೆ ತಮ್ಮನ್ನು ಮೊಬೈಲ್ ಮೂಲಕ ಸಂಪರ್ಕಿಸಿದಾಗ, ತಾವು ಕಾಯಕದಲ್ಲಿ ತೊಡಗಿರುವುದರಿಂದ ಏನೋ, ಹೆಚ್ಚಿಗೆ ಮಾತನಾಡಲಾಗಲಿಲ್ಲ. ಆದಕಾರಣ, ಈ ಪತ್ರ ಬರೆಯುತ್ತಿದ್ದೇನೆ. ತಮಗೆ ಸಮಯ ದೊರೆತಾಗ ಓದಲು ಅನುಕೂಲವಾಗಬಹುದೆಂದು ಈ ಪ್ರಯತ್ನ.

ತಾವು ನನ್ನನ್ನು, ಕೆಲವು ತಿಂಗಳ ಹಿಂದೆ ಸಂಪರ್ಕಿಸಿ – ನಾನು ಬೈಲಹೊಂಗಲದಲ್ಲಿ ಲಿಂ. ಶರಣೆ ಜಯದೇವಿ ತಾಯಿ ಲಿಗಾಡೆಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಮಾತನಾಡಿದ ವಿಷಯದ ಮೇಲೆ ಲಿಂ. ಡಾ. ಬಿ.ಡಿ. ಜತ್ತಿಯವರನ್ನು ಪ್ರಸ್ತಾಪಿಸಿದ್ದಕ್ಕಾಗಿ ತಾವು ಸಂತೋಷ ವ್ಯಕ್ತ ಪಡಿಸಿದ್ದಿರಿ. ಅಂತಹುದೇ ಪ್ರಸಂಗ ಕಳೆದ ಅಕ್ಟೋಬರ್ ೨೧ನೇ ದಿನಾಂಕದಂದು ಬಸವ ಕಲ್ಯಾಣದಲ್ಲಿ ಘಟಿಸಿತು. ಮರುದಿನ ನಾನು ವೇದಿಕೆ ಮೇಲೆ ಮಾತನಾಡುತ್ತಾ, ಅನೇಕ ದಿವ್ಯಾತ್ಮಗಳ ಆಶಯದಂತೆ, ಸೃಷ್ಟಿಯ ಸಕಲ ಚರಾಚರಗಳ ಮನೋ ಬಯಕೆಯಂತೆ ಗುರು ಬಸವಣ್ಣನವರ ಋಣ ತೀರಿಸಲು, ಲಿಂಗಾಯತ ಧರ್ಮದ ಪುನರುತ್ಥಾನದ ಭಾಗವಾಗಿ, ವಿರಾಟ ಸ್ವರೂಪಿ ಭವ್ಯ ದಿವ್ಯ ಬಸವ ಪುತ್ಥಳಿ ಅನಾವರಣಗೊಂಡಿದೆ ಎಂದು ಹೇಳುತ್ತಾ, ಲಿಂ. ಡಾ. ಜತ್ತಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಇದು, ಈ ಎಲ್ಲಾ ಶರಣರ ಸುಪ್ತ ಆಶಯದಂತೆ – ಒಂದು ದಿವ್ಯ ಸ್ಮಾರಕ ಆಗಬೇಕೆನ್ನುವುದು – ಸಂಭವಿಸಿದೆ ಎಂದು ಹೇಳಿದ್ದೇನೆ.

ಮಾನ್ಯರೆ, ಪ್ರತಿ ತಿಂಗಳ 'ಬಸವ ಪಥ'ದಲ್ಲಿ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ತಾವು ವ್ಯಕ್ತಪಡಿಸುತ್ತಿರುವ ಸಂದೇಶ 'ಶರಣ ಸಂಸ್ಕೃತಿಯಲ್ಲಿ ಬದುಕಿ, ಶರಣ ಸಂಸ್ಕೃತಿಯನ್ನು ಉಳಿಸೋಣ, ಬೆಳೆಸೋಣ, ರಕ್ಷಿಸೋಣ' ಎನ್ನುವುದು ನಮ್ಮೆಲ್ಲರನ್ನು ಸದಾ ಎಚ್ಚರದಲ್ಲಿರಿಸುತ್ತಿದೆ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ, ವಂದಿಸುತ್ತೇನೆ.

ಈ ಆಶಯಕ್ಕೆ ಪೂರಕವಾಗಿ, ತಾವು ಉಲ್ಲೇಖಿಸುತ್ತಿರುವ "ಶ್ರೀ, ಶ್ರೀಮತಿ" ಹೊಂದಲಾರದೆಂದು ಅನ್ನಿಸುತ್ತಿದೆ. ಆದ್ದರಿಂದ ಶರಣ, ಶರಣೆ ಪದಗಳನ್ನು ತಾವು ಬಳಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಆದರೆ, ತಾವು ಒಂದು ವೈಯುಕ್ತಿಕ ನಿಲುವನ್ನು ತಳೆದಿದ್ದೀರಿಯೆಂದು ತಿಳಿಸಿದಿರಿ. ಆದರೂ ನನ್ನ ಈ ಸಲಹೆಯನ್ನು ಶರಣ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಪುನಃ ಪರಿಶೀಲಿಸುವಿರಾಗಿ ನಂಬಿದ್ದೇನೆ.

"ವ್ಯಕ್ತಿತ್ವ ವಿಕಸನಕ್ಕಾಗಿ ವಚನಾಮೃತ"ದ ಧಾರಾವಾಹಿಯನ್ನು ತಾವು ಹಮ್ಮಿಕೊಂಡು ಬರುತ್ತಿರುವುದು ಸ್ತುತ್ಯರ್ಹ. ವ್ಯಕ್ತಿತ್ವ ವಿಕಸನ ಎಂದಾಗ, ಮೊದಲ ಮೆಟ್ಟಿಲು "ಸಂಬೋಧನೆ". ಯಾರನ್ನು ಉದ್ದೇಶಿಸಿ ಮಾತನಾಡುವೆವೊ, ಅವರನ್ನು ಸಂಬೋಧಿಸುವುದು ಮೊದಲ ಪಾಠ, ಶಿಷ್ಟಾಚಾರ. ಪ್ರಾರಂಭದಲ್ಲೇ ಎಲ್ಲರಿಗೂ "ಶರಣು ಶರಣಾರ್ಥಿ" ಅಥವಾ "ಶರಣು" ಎಂದು ಹೇಳಬಹುದು. ಕೊನೆಗೂ ಇದನ್ನು ಹೇಳುವ ಪರಿಪಾಠ ಬೆಳೆಸಿಕೊಳ್ಳಲು ವಿನಂತಿಸುತ್ತೇನೆ. ಇದನ್ನು ತಮ್ಮ ಧಾರಾವಾಹಿಯಲ್ಲಿ ಅಪರೂಪಕ್ಕೆ ಕಾಣುತ್ತೇವೆ. ಇದಕ್ಕೆ ಸಾಮಾನ್ಯವಾದ ಉತ್ತರ 'ಸಮಯದ ಅಭಾವ'. ನಿಜ, ಆದರೆ ವ್ಯಕ್ತಿತ್ವ ಅರಳುವ ವಿಧಾನವನ್ನು ದೂರೀಕರಿಸಿದಂತಾಗುವುದಿಲ್ಲವೆ? ಹಾಗೆ, ವಿಶ್ಲೇಷಿಸುವವರು ಶರಣರಾಗಿದ್ದು ಅನೇಕ ಸಲ 'ವಿಭೂತಿರಹಿತ'ರಾಗಿರುತ್ತಾರೆ. ಇದನ್ನು ತಾವು ನಿವಾರಿಸಬಹುದೆಂದು ಭಾವಿಸುತ್ತೇನೆ. ಹಾಗೆ, ಅನುಭಾವಿಗಳು ವಿಶ್ಲೇಷಿಸುವುದಕ್ಕೂ ಇನ್ನಿತರರು (ಸಾಹಿತಿಗಳೇ ಇರಬಹುದು), ಹೇಳುವುದಕ್ಕೂ ವ್ಯತ್ಯಾಸವಿದೆ. ಉದಾಹರಣೆಯಾಗಿ ಮನಗುಂಡಿಯ ಪೂಜ್ಯ ಬಸವಾನಂದ ಸ್ವಾಮೀಜಿ, ಸಾಣೇಹಳ್ಳಿಯ ಪೂಜ್ಯರು, ಬಸವ ನವಲಿಂಗ

Digitalized by e-Sahithya Documentation Forum
Sponsored by Sarayu Foundation Trust

ಶರಣರು. ಆದರೆ 'ಯುಗಾವತಾರಿ' ಪ್ರಖ್ಯಾತಿಯ ಶರಣ ಹೆಬ್ರಿಯವರು ಗುರು ಬಸವಣ್ಣನವರ ವಚನದ 'ದೇವನೊಬ್ಬನೆ ನಾಮ ಹಲವು' ಎನ್ನುವುದನ್ನು ವಿಶ್ಲೇಷಿಸುತ್ತಾ 'ರೂಪ ಹಲವು' ಎಂದು ಹೇಳಿದ್ದರು ! ತಾತ್ವಿಕ ಹಿನ್ನೆಲೆ ಇರದಿರುವುದರಿಂದ ಈ ಆಭಾಸ ಅಷ್ಟೆ! ಮತ್ತು ತಮ್ಮ ಯುಗಾವತಾರಿಯಲ್ಲಿ ಗುರುಬಸವಣ್ಣನವರಿಗೆ ಇಷ್ಟಲಿಂಗದೀಕ್ಷೆಯನ್ನು ಈಶಾನ್ಯ ಗುರುಗಳಿಂದ ಕೊಡಿಸಿದ್ದಾರೆ. ಇಷ್ಟಲಿಂಗವನ್ನು ಗುರುಬಸವಣ್ಣನವರೇ ಕಂಡುಹಿಡಿದಿದ್ದಾರೆನ್ನುವ ವಿಚಾರ ತಮಗೂ ಗೊತ್ತಿದೆ ಎಂದು ಭಾವಿಸುತ್ತೇನೆ.

ಆಗಾಗ ವಚನಾಮೃತದ ಧಾರಾವಾಹಿಯಲ್ಲೂ, 'ಬಸವ ಪಥ'(ಬ.ಪ.)ದಲ್ಲೂ ಅನೇಕ ಜನ ಸಾಹಿತಿಗಳೇ ಇರಬಹುದು, ಅವರು ಗುರು ಬಸವಣ್ಣನವರನ್ನು ಕುರಿತು ಮಾತನಾಡುವಾಗ ಏಕ ವಚನದಲ್ಲಿ ಸಂಬೋಧಿಸುತ್ತಿರುತ್ತಾರೆ. ಧರ್ಮ ಸ್ಥಾಪಕರಾದ ವಿಶ್ವಗುರು ಬಸವಣ್ಣನವರನ್ನು ಕುರಿತು ಹೇಳುವಾಗ ಬಹುವಚನದಲ್ಲಿ ಉಲ್ಲೇಖಿಸಲು ಮನವಿ ಮಾಡುತ್ತೇನೆ. "ಗುರು ನಾನಕ್" ಎಂದು ಸಿಖ್‌ರು ನಮ್ಮ ಮಾತಿನಲ್ಲೂ ನುಡಿಯುವಂತೆ ಮಾಡಿದ್ದಾರೆಂದಾಗ, ಅಂತಹ ಮಹಾತ್ಮರನ್ನು ಹೆಸರಿಸುವಾಗ, ಸಂಬೋಧಿಸುವಾಗ ಬಹುವಚನದಲ್ಲೇ ಉಲ್ಲೇಖಿಸಲು ತಮ್ಮಲ್ಲಿ ನಮ್ರವಾಗಿ ಕೇಳಿಕೊಳ್ಳುತ್ತೇನೆ. ಈ ರೀತಿಯಾಗಿ ಶರಣ ಸಂಸ್ಕೃತಿಯನ್ನು ರಕ್ಷಿಸಿ, ಉಳಿಸಲು ಸಾಧ್ಯ..

ನೀವು ಸ್ತ್ರೀ ದ್ವೇಷಿಯೆ? ಡಿಸೆಂಬರ್ ೨೦೧೨ರ ಬಸವ ಪಥದಲ್ಲಿ ತಾವು 'ಪೂಜ್ಯ ಮಾತೆ ಮಹಾದೇವಿಯವರು' ಎಂದು ಉಲ್ಲೇಖಿಸಿದ್ದೀರಿ. ಆದರೆ, ಅಕ್ಟೋಬರ್ ೨೦೧೨ರ ಬ.ಪ.ದಲ್ಲಿ ಪರಮ ಪೂಜ್ಯ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಶ್ರೀ ಸಿದ್ಧಲಿಂಗ ಸ್ವಾಮಿಗಳೆಂದು ತಾವು ಬರೆದಿರುವುದು ಸರಿಯಿದೆ. ೧೯೭೦ ರಿಂದಲೂ ಪೂಜ್ಯ ಮಾತಾಜಿಯವರನ್ನು, ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧಿಕಾರಿಗಳಾಗಿದ್ದಾಗಿನಿಂದಲೂ "ಜಗದ್ಗುರು" ಎಂದು ಲಿಂ. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳೇ ಹೇಳುತ್ತಿದ್ದರು. ಮುಂದೆ, 'ಬಸವ ಧರ್ಮದ ಮಹಾ ಜಗದ್ಗುರು ಪೀಠ'ದ ಪೀಠಾಧಿಕಾರಿಗಳಾದ ಮೇಲೆ, ಪೂಜ್ಯ ಮಾತಾಜಿಯವರು "ಮಹಾಜಗದ್ಗುರು"ವಾದರು. ಹೀಗಿದ್ದೂ, ತಾವು ಕೇವಲ 'ಪೂಜ್ಯ ಮಾತೆ ಮಹಾದೇವಿಯವರು' ಎಂದು, ಸಿದ್ಧಗಂಗಾ ಶ್ರೀಗಳಿಗೆ ' ಪರಮ ಪೂಜ್ಯ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ' ಗಳೆಂದು ಸ್ತ್ರೀ, ಪುರುಷ ಸ್ವಾಮಿಗಳಲ್ಲಿ ಭೇದಮಾಡುತ್ತಿರುವುದು ಶರಣ ಸಂಸ್ಕೃತಿಯಾಗಲಾರದೆಂದು ಭಾವಿಸಿದ್ದೇನೆ. ಆದರೆ ನೀವು ಸ್ತ್ರೀ ದ್ವೇಷಿಯಂತೂ ಅಲ್ಲವೆಂದು ನಂಬಿರುವೆ.

ಅಕ್ಟೋಬರ್2012ರ ಬಸವ ಪಥದದಲ್ಲಿ ತಾವು ಬರೆಯುತ್ತಾ "ಸಮಾಜೋ-ಅಧ್ಯಾತ್ಮಿಕ ಕ್ರಾಂತಿಯನ್ನು ಸಮಾಜೋ-ಧಾರ್ಮಿಕ ಕ್ರಾಂತಿಯನ್ನಾಗಿ ವಿಕೃತಗೊಳಿಸುವ..." ಎಂದು ಬರೆದಿದ್ದೀರಿ. ಹಾಗಾದರೆ ಬಸವಯೋಗಿ ಸಿದ್ಧರಾಮೇಶ್ವರರು ಹೇಳುವ 'ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ" ಎನ್ನುವುದು ತಮ್ಮ ದೃಷ್ಟಿಯಲ್ಲಿ ವಿಕೃತವಾದಂತೆಯೇ? **Religion is to follow regularly the moral values.** ಅದು ಸಮಯ ಕಳೆಯುವ ಸಾಧನ ಆಗಬಾರದು ಅಷ್ಟೆ! ಅಧ್ಯಾತ್ಮ ಎನ್ನುವುದು ಈಗ ಎಷ್ಟರ ಮಟ್ಟಿಗೆ ಉಲ್ಲೇಖವಾಗುತ್ತಿದೆ ಎಂದರೆ ಕೇವಲ ಕೇಳುವುದೇ ಆಗಿದೆಯೇ ಹೊರತು ಆಚರಣೆಯಲ್ಲಿ ಬರುವ ಅಗತ್ಯವಿಲ್ಲದಂತಾಗಿದೆ. ಇದಕ್ಕೆ ಸಾಕಷ್ಟು ವ್ಯಕ್ತಿಗಳನ್ನು ಹೆಸರಿಸಬಹುದು. ಹಾಗಾದಲ್ಲಿ, ಇದು ಕೇವಲ "PASSTIME" ಹೊರತು ಮತ್ತೊಂದಲ್ಲ. ಈ ಹೆಸರು 'ಅಧ್ಯಾತ್ಮ' ಎನ್ನುವುದು ಇಂದಿನ ಜಾತಿಗಳು ವಿಜೃಂಭಿಸಲು ಒಂದು ಕಾರಣವೂ ಹೌದು. "ಧರ್ಮ" ಆಚರಣೆಯಿಂದ ಬರುತ್ತದೆ, ಅಧ್ಯಾತ್ಮ ಗಟ್ಟಿಗೊಳ್ಳಲು ಪೂರಕವಾಗಿರುತ್ತದೆ. ಈಗ ಲಿಂಗಾಯತ ಸಮಾಜ – ಹುಟ್ಟಿನಿಂದ ಬರುವ ಜಾತಿ, ಜಾತಿಗಳಾಗಿ ಛಿದ್ರ ವಿಛಿದ್ರವಾಗಿ ವಿಂಗಡಿಸಿದೆಯೇ ಹೊರತು, ಅಧ್ಯಾತ್ಮ ಎನ್ನುವುದು ಇನ್ನು ದೂರದ ಮಾತೇ ಸರಿ! ಇದಕ್ಕೆ ತಮ್ಮ ಅನುಭವ ತಿಳಿಯುವ ಆಶೆ ನನ್ನದು.

'ವೀರಶೈವ' ಪದ ಬಳಕೆಯನ್ನು ತಾವು ಮಾಡಿದ್ದೀರಿ. ಹಿಂದೂವಿನಲ್ಲಿ ಮಾಂಸಾಹಾರಿಗಳಿದ್ದಾರೆ. ಜೈನರು ಶುದ್ಧ ಸಸ್ಯಾಹಾರಿಗಳು. ಅವರು ಮಾಂಸಾಹಾರ ಪದ್ಧತಿಯನ್ನು

ಪ್ರೋತ್ಸಾಹಿಸುವ ಹಿಂದುವಿನ ಅಂಗವಾಗಲು ಒಪ್ಪಲಿಲ್ಲ. ಹಿಂದುವಿನ ಒಂದು ಶಾಖೆಯಾದ ಶೈವದ ಮುಂದುವರಿದ ಭಾಗವಾದ ವೀರಶೈವ ಶುದ್ಧ ಸಸ್ಯಾಹಾರಿಯೇ? ಎರಡನ್ನು ಸಮಾನಾಂತರದಲ್ಲಿ ನೋಡುವ ದೃಷ್ಟಿಕೋನಕ್ಕೆ ಏನೆನ್ನಬೇಕೊ ತಿಳಿಯದು. ಈ ವೀರಶೈವದ ಉಪಟಳದಿಂದಾಗಿ ನಾನು ಮೇಲೆ ಉಲ್ಲೇಖಿಸಿದ, ಜಾತಿ ಪದ್ಧತಿಯಿಂದ ನಮ್ಮ ಸಮಾಜ ಛಿದ್ರ ವಿಛಿದ್ರವಾಗಲು ಮತ್ತೊಂದು ಕಾರಣ. ಇದರ ಅರ್ಥ ಹಿಂದೂ ಧರ್ಮದಂತೆ ಈ (ಗುರು ಬಸವಣ್ಣನವರು ಕೊಟ್ಟ ಲಿಂಗಾಯತ) ಧರ್ಮವನ್ನು Veg & Non-veg ಹೋಟೆಲ್‌ನಂತೆ ಮಾರ್ಪಡಿಸುವ ಹುನ್ನಾರವಡಗಿದೆ ಎನ್ನಲು ವಿಧಿಯಿಲ್ಲ. ಇದು ಖಂಡಿತವಾಗಿಯೂ ಶರಣರ ಆಶಯಕ್ಕೆ ತದ್ವಿರುದ್ಧವೇ ಆಗಿದೆ.

ತಾವು, ಬಹು ಮೇಲ್ಮಟ್ಟದ ಚಿಂತನೆಯಾದ " ಲಿಂಗ ತತ್ವ"ವನ್ನು ಪ್ರತಿಪಾದಿಸುತ್ತಿದ್ದಿರಿ. ಅದರ ಬಗ್ಗೆ ಈ ಮಧ್ಯೆ ಯಾಕೋ ಬರೆಯುತ್ತಿಲ್ಲ. ಅದು 'ಜಾತಿಯ ವಾದ' ಎಂದು ಜ್ಯೋತಿಯನ್ನು ದೂರೀಕರಿಸಿಲ್ಲವಲ್ಲ? ಡಿಸೆಂಬರ್ ತಿಂಗಳ ಬಸವ ಪಥವು ಸುಂದರವಾಗಿ ರೂಪುಗೊಂಡಿದೆ. ಇನ್ನಿತರ ವಿಚಾರಗಳನ್ನು ಪ್ರಸ್ತಾಪಿಸುತ್ತಾ, ತಾವು ಭವ್ಯ ದಿವ್ಯ ಬಸವ ಮೂರ್ತಿಯ ಬಗ್ಗೆ ಕೆಲವು ಮೆಚ್ಚುಗೆಯ ಶಬ್ದಗಳನ್ನು ಬರೆದಿದ್ದೀರಿ, ಸಂತೋಷ. ಬಸವ ಭಕ್ತರು ಅಭಿನಂದನೀಯರು ಎಂದೂ ಹೇಳಿದ್ದೀರಿ. ಅದರಲ್ಲಿ ತಾವೂ ಒಬ್ಬರಿರಬೇಕೆಂದು ನಾನು ಭಾವಿಸಿದ್ದೇನೆ. ತಾವು ತಿಳಿಸಿದಂತೆ ಈ ಪ್ರಯಾಸದ ದಾಸೋಹಕ್ಕೆ ಸಹಕರಿಸಿದವರೆಲ್ಲರೂ ಧನ್ಯರು. ಆ ಅವಕಾಶ ಕಲ್ಪಿಸಿಕೊಟ್ಟ ಪೂಜ್ಯ ಮಾತಾಜಿಯವರಿಗೆ ಈ ಸಮಾಜ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು.

ಮುಂದುವರೆದು, 'ಆದಾಗ್ಯೂ' ಎಂದು ಅಂಕಿತನಾಮದ ಬದಲಾವಣೆಯ ಪ್ರಸ್ತಾಪ ಮಾಡಿ, ಈ ಸಂದರ್ಭಕ್ಕೆ ಸರಿಹೊಂದದ ವಿಚಾರವನ್ನು ಎತ್ತಿ ತಮ್ಮ "ಬಾಲಿಶ"ತನವನ್ನು ಮೆರೆದಿದ್ದೀರಿ. ಯಾರೂ ಅಂಕಿತ ನಾಮದ ಬದಲಾವಣೆಯನ್ನು ಒಪ್ಪುವಂತೆ ಜೋತು ಬೀಳಲಿಲ್ಲವಲ್ಲ?. ಆ ರೀತಿಯಾಗಿ ಲೋಕಾರ್ಪಣೆಯೆಂದು ಭಾಗವಹಿಸಿದ ಮಾತ್ರಕ್ಕೆ ಅವರು ಈ ಬದಲಾವಣೆಗೆ ಒಪ್ಪಿದ್ದಾರೆ ಎಂದು ಭಾವಿಸಬೇಕಿಲ್ಲವಲ್ಲಾ? ಅದಕ್ಕಾಗಿಯೇ ವಿಶೇಷ ಸಭೆ, ಸಮಾರಂಭ ಕರೆದಿದ್ದರೆ – ಅಂತಹುದಕ್ಕೆ ಹೋಗಬಹುದು ಇಲ್ಲವಾದರೆ ಬಿಡಬಹುದು. ಅಷ್ಟೇ ಅಲ್ಲ, ಹೋಗಿ ಅದರ ವಿರುದ್ಧವೂ ವಾದಿಸಬಹುದು. ಅಂದ ಮಾತ್ರಕ್ಕೆ, ಹೋಗದೇ ಇದ್ದದ್ದು ಗುರು ಬಸವಣ್ಣನವರಿಗೆ ಮೆಚ್ಚುಗೆಯಾಗುತ್ತದೆಯೇ ನೀವೇ ಆಲೋಚಿಸಿರಿ. ಈ ರೀತಿ, ತಾವೊಬ್ಬರೆ ಭಾವಿಸಿದಂತಿಲ್ಲ, ತಮ್ಮಂಥ ಮಹಾನುಭಾವರು ನಮ್ಮ ಸಮಾಜದಲ್ಲಿದ್ದಾರೆಂದು, ತಾವು ಅವರ ಪರವಾಗಿ ವಾದಿಸಿ, ಅವರ ಸಣ್ಣತನವನ್ನು ತಾವೇ ಪ್ರತಿನಿಧಿಸುತ್ತಿದ್ದೀರಿ! ಬಹುಶಃ, ಅಂದು ಗುರು ಬಸವಣ್ಣನವರೇ ಶರಣ ಧರ್ಮದ ವಿರೋಧಿಯಾದ ಈ ದ್ವೇಷ, ಅಸೂಯೆಯಿಂದ ಕುದಿಯುತ್ತಿರುವ (ಬಸವ)ಭಕ್ತರೆನ್ನುವವರನ್ನು ದೂರೀಕರಿಸಿ, ತಮ್ಮನ್ನು ಪರಿಚಯಿಸಿಕೊಂಡಿದ್ದಾರೆ, ಇನ್ನಿತರರಲ್ಲಿ ಧನ್ಯತೆಯ ಭಾವ ಮೂಡುವಂತೆ ಮಾಡಿದ್ದಾರೆ. ಭಾಗವಹಿಸಿದ ಸುಮಾರು ೫ ಲಕ್ಷದ ಮೇಲ್ಪಟ್ಟು ಸೇರಿದ ಜನ ಕೃತಜ್ಞತೆಯನ್ನು ಬಸವ ತಂದೆಗೆ ಸಲ್ಲಿಸಲು ಅನುವಾಯಿತು.

ನಮ್ಮಲ್ಲಿ ಅನೇಕರು, ತಾವು ಬಸವಭಕ್ತರೆಂದು ಹೇಳಿಕೊಳ್ಳುತ್ತಾ – ಶರಣರನ್ನು ಕೇವಲ ಸಾಹಿತ್ಯಿಕ ನೆಲೆಯಲ್ಲೇ ಕೇವಲ ಸಾಹಿತಿಗಳೇ ಆದವರು ಅಳತೆಮಾಡಿದಂತೆ ಮಾಡುತ್ತಾರೆ. ಇದರಿಂದಾಗಿ, ಆ ಆದಿ ಶರಣರ ಆಶಯಗಳೇನು ಎಂದು ಮೇಲ್ನೋಟಕ್ಕೆ ತಿಳಿದಂತೆ ಕೆಲವು ಶಬ್ದಾಡಂಬರ ಬಳಸುತ್ತಾರೆ ಅಷ್ಟೇ. ಶರಣರನ್ನು ಅರ್ಥಮಾಡಿಕೊಳ್ಳಲು, ಅವರ ಆಶಯಗಳನ್ನು ಅರಿಯಲು – ಸಾಹಿತ್ಯಿಕ ಸೊಬಗು ತಿಳಿದುಕೊಂಡಿರಬೇಕು, ದಾರ್ಶನಿಕ ದೃಷ್ಟಿಕೋನದ ಚಿಂತನೆ ನಡೆಸಿರಬೇಕು ಹಾಗೂ ಅನುಭಾವಿಕ ಜೀವನ ವಿಧಾನ ಅವರದಾಗಿದ್ದರೆ ಪ್ರಾಮಾಣಿಕತೆಯಿಂದಾಗಿ ಪೂರ್ಣತೆ ದೊರೆಯಲು ಸಹಕಾರಿಯಾಗುವುದು. ಈ ಯಾವ ಪರಿಜ್ಞಾನವು ಇರದ, ಕೇವಲ PASSTIME ಆಗಿ, PART TIME ಚಿಂತಕರಿಂದ ಶರಣರನ್ನು ತಿಳಿದಿದ್ದೇವೆ ಎನ್ನುವವರನ್ನು ಏನೆನ್ನಬೇಕು, ತಾವೇ ಆಲೋಚಿಸಿ. ಎಲ್ಲರೂ ಎಲ್ಲವುದನ್ನು ಒಪ್ಪುತ್ತಾರೆ ಎನ್ನುವ ಭ್ರಮೆ ಇದ್ದವರು

Digitalized by e-Sahithya Documentation Forum
Sponsored by Sarayu Foundation Trust

ಯಾವ ಸೃಜನಾತ್ಮಕ ಕೆಲಸ, ವಿಶ್ಲೇಷಣಾತ್ಮಕ ಸತ್ಯಾನ್ವೇಷಣೆಯ ಸಾಧನೆಯನ್ನು ಮಾಡಲಾರರು. ತಾವು ಒಪ್ಪುತ್ತೀರಿ, ಒಪ್ಪುವಿರಿ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಅವರವರ ಭಾವಕ್ಕೆ, ಅವರವರ ಭಕ್ತಿಗೆ – ದೇವನ ಇರವು, ಅರಿವು ಸಾಧ್ಯ.

೧೧ನೇ ಕಲ್ಯಾಣ ಪರ್ವವು ಮತ್ತೊಂದು ಇತಿಹಾಸಕ್ಕೆ ನಾಂದಿಯಾಯಿತು. ಶರಣ ಸಚ್ಚಿದಾನಂದ ಚಟ್ನಳ್ಳಿಯವರು ಸಂಪಾದಿಸಿದ "ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ" ಎನ್ನುವ ಮಹತ್ವಪೂರ್ಣ ಕೃತಿ ಲೋಕಾರ್ಪಣೆ ಆಯಿತು. ಅದನ್ನು ಹತ್ತಿಕ್ಕುವ ಪ್ರಯತ್ನಗಳು ನಡೆದವು. ಕಾರಣ, ಇದು ಪೂಜ್ಯ ಮಾತಾಜಿಯವರ 'ವಿಶ್ವ ಕಲ್ಯಾಣ ಮಿಷನ್'ನ ಪ್ರಕಟಣೆ ಎಂದು. ಇದರ ಮಹತ್ವವನ್ನರಿಯದಲೆ ತಾವೂ ಅವರನ್ನು ಅನೇಕ ಸಲ ಅಭಿನಂದಿಸಿದ್ದ ಒಬ್ಬ ದೊಡ್ಡ ಸ್ವಾಮಿಗಳು, " ಚನ್ನಮಲ್ಲಿಕಾರ್ಜುನ ದೇವರ ದೇವ' ಅಂಕಿತನಾಮವನ್ನು ತಾವು ಅಕ್ಕನ ವಚನದಲ್ಲಿ ಕಂಡೇಯಿಲ್ಲವೆಂದು ತಮ್ಮ ಅಜ್ಞಾನದ ತುಣುಕನ್ನು ಪ್ರದರ್ಶಿಸಿದರು. ಇಂಥವರ ನಡತೆ ಹಳ್ಳಿ ಭಾಷೆಯಲ್ಲಿ ಹೇಳುವಂತೆ 'ಎತ್ತು ಈಯಿತು ಎಂದರೆ, ಗ್ವಾದ್ಲಿಗೆ ಕಟ್ಟು' ಎಂದಂತೆ. ಯಾಕೆ ಪೂಜ್ಯ ಅಕ್ಕ ಈ ಪದ ಪ್ರಯೋಗ ಮಾಡಿರಬೇಕೆಂಬ ಚಿಂತನೆಯೂ ಇಲ್ಲದಾಗಿದೆ. ಇದರ ಬಗ್ಗೆ ತಮ್ಮಂಥವರಿಂದ ಪ್ರತಿಕ್ರಿಯೆ ಕೊಡಲಾರದ ಮಟ್ಟಿಗೆ ವಿವೇಚನೆ ನಡೆದಿದೆ. ಶರಣ ಚಟ್ನಳ್ಳಿ ಅವರನ್ನು ಅಭಿನಂದಿಸುವ ಸೌಜನ್ಯವೂ ಇಲ್ಲ. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುಗಳ ವಚನ ' ಪ್ರಣತೆ ಇದೆ, ಬತ್ತಿ ಇದೆ, ಜ್ಯೋತಿ ಬೆಳಗುವಡೆ, ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ? ಗುರುವಿದೆ, ಲಿಂಗವಿದೆ ಶಿಷ್ಯನಲ್ಲಿ ಸುಜ್ಞಾನವಿಲ್ಲದನ್ನಕ್ಕರ ಭಕ್ತಿ ಎಲ್ಲಿಯದೋ?' ಎನ್ನುವಂತೆ ಸತ್ಯಾನ್ವೇಷಣೆ, ಪ್ರಾಮಾಣಿಕತೆ ಎಂಬ ಸಾಮಗ್ರಿ ಇಲ್ಲದಿದ್ದರೆ ಅಂಥವರು ಹೇಳುವ ಡಾಂಭಿಕ ಮಾತಿಗೆ ಬಲಿಯಾಗುವವರೆ ಬಹಳ. ಇದನ್ನು ಬಹಳ ದಿನ ನಡೆಸಲು ಗುರು ಬಸವಣ್ಣನವರು ಬಿಟ್ಟಾರೆಯೆ?

ತಾವು 'ಸಮಾಜದ ಸಂಘಟನೆ'ಯ ವಾದವನ್ನು ಮುಂದಿಡುತ್ತಾ ಬಂದಿದ್ದೀರಿ. ಈ ಸಂಘಟನೆ – ಯಾರು ಎಂದೋ ಮಾಡಬೇಕಾದ ಕರ್ತವ್ಯವನ್ನು ಇಂದಿಗೂ ನೆರವೇರಿಸದಿದ್ದಾಗ, ಶರಣರ ಚಿಂತನೆಯಿಂದ ದೂರ ಸರಿದು ಬಹುದೇವತಾ ಆರಾಧನೆಯಲ್ಲಿ ಸಮಾಜ ವಿಚಿತ್ರವಾಗಿ ವರ್ತಿಸುತ್ತಿರುವಾಗ, ಕೇವಲ ವೈಯಕ್ತಿಕ ನೆಲೆಯಲ್ಲೆ, ಸಮಾಜದ ಹಿತ ಚಿಂತನೆ ಮರೆತು ಬದುಕುತ್ತಿರುವಾಗ, ಜಾತಿ ಜಾತಿಗಳಾಗಿ ಸಮಾಜ ಒಡೆದಿರುವಾಗ ಈ ವಾದ ಇಂದಿನದಲ್ಲ. ಶರಣರ ಹಾಗೂ ತಮ್ಮ ತಮ್ಮ ಜೀವನ ವಿಧಾನ ಅರಿಯದವರ, ಬೇರೆಯಾದವರ ಚಿಂತನೆ, 'ಸಮಾಜ ಬೆಳೆಯ ಬೇಕೆಂದಲ್ಲ', ತಮ್ಮ ಕೀಳು ಚಿಂತನಾ ಮಟ್ಟಕ್ಕೆ ಇನ್ನಿತರರನ್ನು ಕೆಳಗಿಳಿಸುವುದೇ ವಿನಃ ಮತ್ತೊಂದಲ್ಲ! ಅನೇಕ ಶರಣರಂತೆ, ಅನೇಕ ಸಾಮಾನ್ಯರೂ ತಿಳಿಯದಲೆ ಮತ್ತು ಹುಟ್ಟಿನಿಂದಲೇ ಬಹು ದೇವತಾ ಆರಾಧನೆಯಿಂದ ಬಂದವರು. ಹಿಂದೂ ಸಮಾಜದ ಅಂಗವೇನೋ ತಾವು ಎಂದು ಭಾವಿಸಿಯೇ ಅಲ್ಲವೆ?! ಅವರಲ್ಲಿ ಜ್ಞಾನೋದಯವಾಗಿ, ನಂಬಿಕೆ ಗಟ್ಟಿಗೊಂಡು ಏಕ ದೇವೋಪಾಸಕರಾಗಿ ಬದಲಾದವರು ಇದ್ದಾರೆ. ನಾನೂ ಈ ತೆಕ್ಕೆಯಲ್ಲಿ ಬಂದವನಾದ ಕಾರಣ ನನಗೆ ಅನುಭವವಾಗಿದೆ. ಆದರೆ, ಹುಟ್ಟಿನಿಂದಲೇ ಏಕ ದೇವೋಪಾಸನೆಯನ್ನು ರೂಢಿಸಿಕೊಂಡವರು ಅತೀ ವಿರಳ. ಇನ್ನು ಆದಿ ಶರಣರ ಜೀವನದಲ್ಲೂ ಇದು ಘಟಿಸಿದೆ ಎಂದ ಮೇಲೆ, ಸಾಮಾನ್ಯರ ಗತಿಯನ್ನು ಏನೆಂದು ಅರ್ಥೈಸಬಹುದು? ಈ ಚಿಂತನೆಗೆ ಎಡೆಮಾಡಿ ಕೊಡುತ್ತವೆ ಲಿಂಗದೇವ ಮತ್ತು ಈ ಇನ್ನೊಂದು ವಚನಾಂಕಿತವಾದ "ಚನ್ನಮಲ್ಲಿಕಾರ್ಜುನದೇವರ ದೇವ". ಶರಣರ ಸತ್ಯಾನ್ವೇಷಣೆಯು ಬೆಳಕು ಕಂಡಿದೆ. ಇನ್ನೂ ಕತ್ತಲಲ್ಲಿ ಬದುಕುವವರಿಗೆ, ದಂಧೆ ಮಾಡುವವರಿಗೆ ಗುರು ಬಸವಣ್ಣನವರ ದಯೆಯಿಂದ ಇನ್ನು ಸಾಧ್ಯವಿರಲಾರದು. ಈ ಮಹತ್ವಪೂರ್ಣ ಕೃತಿಯನ್ನು ಒಮ್ಮೆ ತಾವು ಓದಿರೆಂದು ವಿನಂತಿಸುವೆ.

'ಇವ ನಮ್ಮವ, ಇವ ನಮ್ಮವ ' ಎನ್ನುವ ಗುರು ಬಸವಣ್ಣನವರ ಹೆಸರಿನಲ್ಲಿ, ಈಗ 'ದ್ವೇಷ, ಅಸೂಯೆ' ನಮ್ಮ ಸಮಾಜದಲ್ಲಿ ಮಡುಗಟ್ಟಿದೆ, ಮನೆಮಾಡಿದೆ. ಎಷ್ಟರ ಮಟ್ಟಿಗೆಯೆಂದರೆ, ಪೂಜ್ಯ ಮಾತಾಜಿಯವರನ್ನು ಹೊರಗಿಟ್ಟಿದ್ದೇವೆ ಎನ್ನುವ ದುಷ್ಟ, ಧೂರ್ತ ಬುದ್ಧಿ ಅವರನ್ನು ಆವರಿಸಿದೆ, 'ವಿನಾಶ ಕಾಲೇ ವಿಪರೀತ ಬುದ್ಧಿ' ಎನ್ನುವಂತೆ. ಬಾಯಲ್ಲಿ ಗುರು ಬಸವಣ್ಣನವರು ಬೇಕು,

ನಡೆಯಲ್ಲಿ ತದ್ವಿರುದ್ಧ ! "ಲಿಂಗದಲ್ಲಿ ಪೂಜೆ ಜಂಗಮದಲ್ಲಿ ನಿಂದನೆ" ಎನ್ನುವ ಗುರುಬಸವಣ್ಣನವರ ವಾಣಿಯಂತಾಗಿದೆ ಅವರೆಲ್ಲರ ಮಾತಾಜಿಯವರ ಮೇಲಿನ ದ್ವೇಷ. ಅವರ ತತ್ವವನ್ನು ಆಚರಿಸಲು ಆಗದವರಿಂದ 'ದ್ವೇಷಾಸೂಯೆ' ಬಿತ್ತಲು ಸಾಧ್ಯವೇ ಹೊರತು, " ಬಸವ ತತ್ವಾಮೃತ"ದವರಿಂದ ಸಾಧ್ಯವೇ ಇಲ್ಲ. ಇಂಥವರನ್ನು, ಹಣ ಮಾಡುವವರನ್ನು, ಸಮಾಜದಲ್ಲಿ ಶ್ರೇಷ್ಠರೆಂದು ಬಿಂಬಿಸುವವರು ಸ್ವಾಮಿಗಳಲ್ಲೆ, ಕೆಲವು ಬಸವಭಕ್ತರಲ್ಲೆ ಇದ್ದಾರೆಂದರೆ, ಇನ್ನು ಸಾಮಾನ್ಯರನ್ನು ಕೆಡಿಸುವ ಅರೆ ಬರೆ ತಿಳಿದಂಥ ಕೆಲವು ಸಾಹಿತಿಗಳು, ಚಿಂತಕರೆನ್ನುವವರ ಉದ್ದೇಶ ಗೋಚರಿಸುತ್ತದೆ. ಈ ರೀತಿಯ ಜನರನ್ನು ಕಂಡೇ ಶ್ರೀ ಸ್ವಾಮಿ ವಿವೇಕಾನಂದರು "WE HATE SOME PEOPLE BECAUSE WE DO NOT KNOW THEM, WE DO NOT KNOW THEM BECAUSE WE HATE THEM" ಎಂದು ಉದ್ಗಾರ ಎತ್ತಿದ್ದಾರೆ. ಪೂಜ್ಯ ಮಾತಾಜಿಯವರನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಈ ತಿಳಿದಂತಹವರೆಂಬುವವರು ಇದುವರೆವಿಗೂ ಮಾಡಲೇ ಇಲ್ಲ!

ಏನೆಲ್ಲಾ ಮಾಡಬಹುದಾದ, ಸಾಧಿಸಬಲ್ಲವರಾದ ಈ ಸಮಾಜ ಬಾಂಧವರು – ಶರಣರು ಬೋಧಿಸಿದ ಏಕ ದೇವೋಪಾಸನೆ, ಸಾಮೂಹಿಕ ಜೀವನ ವಿಧಾನ, ಆರೋಗ್ಯ ಪೂರ್ಣ ಜೀವನ ಕ್ರಮಗಳಿಂದ ವಿಮುಖರಾಗಿದ್ದಾಗ – ಅವರನ್ನು ಎಚ್ಚರಿಸುವ ಗೋಜಿಗೆ ಹೋಗದೆ, ಸಮಾಜದ ಕೆಲವು ಪ್ರಮುಖರು, ಸಾಹಿತಿಗಳು, ಚಿಂತಕರು – ತಾವೂ ಮಾಡಲಾಗದೆ, ಮಾಡುವವರ ವಿರುದ್ಧ ಎತ್ತಿ ಕಟ್ಟಿ, ಸುಖ ನಿದ್ರೆಯಲ್ಲಿ ತೊಡಗಿಕೊಂಡಿದ್ದಾರೆ. ಅನೇಕ ಧರ್ಮ ಪ್ರಚಾರಕರೆಂಬುವವರು ಶಾಲೆ, ಕಾಲೇಜುಗಳನ್ನು ತೆರೆದು – ಒಂದು ಸಂಸಾರ ತೊರೆದು ಇನ್ನೊಂದು ಸಂಸಾರದಲ್ಲಿ ತಮ್ಮನ್ನು ತಾವು ಭದ್ರ ಪಡಿಸಿಕೊಂಡಿದ್ದಾರೆ. ಧರ್ಮದ ಕಡೆ ಚಿಂತನೆ ಯಾರು ಮಾಡುತ್ತಿದ್ದಾರೆಯೋ ಧರ್ಮಗುರುವೇ ಬಲ್ಲರು! ಅಂಥವರನ್ನು ಹಿಂದಿಕ್ಕಲು, ಹತ್ತಿಕ್ಕಲು ಇಲ್ಲ ಸಲ್ಲದ, ತಿಳಿದೂ ಆಪಾದನೆ ಮಾಡುತ್ತಲೇ ಇದ್ದಾರೆ. ಶರಣರು ಕೊಟ್ಟ, ತ್ಯಾಗ ಬಲಿದಾನದಿಂದ ರೂಪಿಸಿದ ಈ ಧರ್ಮ ಅವನತಿಗೆ ಇಳಿಯುತ್ತಿರುವಾಗಲೂ ನೋಡಿ, ತಮ್ಮ ಬೇಳೆ ಬೇಯಿಸಿ ಕೊಳ್ಳುವವರು ಯಾರೇ ಇರಲಿ, ಅವರಿಗೆ ಧಿಕ್ಕಾರವಿರಲಿ. "ಸತ್ಯದ ನಿಲವನರಿಯದೆ ಹೋದಿರಲ್ಲಾ! ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ! ಅಹಂಕಾರವೆಂಬ ಸದಮದ ಗಜವನೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ! ಲಿಂಗದೇವರನ್ನರಿಯದೆ ನರಕಕ್ಕೆ ಭಾಜನವಾದಿರಲ್ಲಾ!" ಗುರು ಬಸವಣ್ಣನವರು ಇಂಥವರನ್ನು ಎಂದೂ ಕ್ಷಮಿಸರು.

ಇನ್ನು ಮೇಲಾದರೂ ಆದಿ ಶರಣರ ಮತ್ತು ಧರ್ಮಗುರುವಿನ ಋಣ ತೀರಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡು, ಎಲ್ಲಾ ಶರಣ ಧರ್ಮದ ಹಿತೈಷಿಗಳನ್ನು ಒಗ್ಗೂಡಿಸಿ, ಶರಣರ ಮನೋಬಯಕೆಯ ವಿರೋಧಿಯಾದ ಈ 'ದ್ವೇಷ, ಅಸೂಯೆ'ಯಿಂದ ಹೊರಬಂದು, " ಶರಣ ಸಂಸ್ಕೃತಿಯಲ್ಲಿ ಬದುಕಿ, ಶರಣ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ ಮತ್ತು ರಕ್ಷಿಸಿ. ಶರಣರು ತಮ್ಮ ಅನುಭಾವದ ಮೂಸೆಯಲ್ಲಿ ಬೋಧಿಸಿದ ಏಕದೇವೋಪಾಸನೆ, ಸಾಮೂಹಿಕ ಜೀವನ ಕಲೆ, ಆರೋಗ್ಯ ಪೂರ್ಣ ಜೀವನ ಕ್ರಮಗಳನ್ನು ಅಳವಡಿಸಿಕೊಂಡು ವಿಶ್ವವ್ಯಾಪಿಗೊಳಿಸೋಣ, ವಿಶ್ವಮಾನ್ಯಗೊಳಿಸೋಣ, ವಿಶ್ವವಂದ್ಯರಾಗೋಣ. ಅಲ್ಲಿಯವರೆವಿಗೂ ವಿಶ್ರಮಿಸದಿರೋಣ ಎಂದು ನನ್ನ ಕಳಕಳಿಯ ವಿನಂತಿ.

ಶರಣು ಶರಣಾರ್ಥಿಗಳೊಂದಿಗೆ,

ತಮ್ಮ ನಂಬುಗೆಯ

(ಕೆ. ಬಸವರಾಜ)

"ಲಿಂಗದೇವ ಲಹರಿ" 202, ಶಿವತೀರ್ಥ ಅಪಾರ್ಟಮೆಂಟ್
ಗೋಕಾಕ ರಸ್ತೆ, ಬೆಳಗಾವಿ – 590 016, 9448444771

Digitalized by e-Sahithya Documentation Forum
Sponsored by Sarayu Foundation Trust

ಶಿವಶರಣಪ್ಪ ವಾಲಿ
ಪ್ರಧಾನ ಸಂಪಾದಕರು, ಉತ್ತರ ಕರ್ನಾಟಕ ದಿನ ಪತ್ರಿಕೆ
ಸಮಾಜ ಕೃಪೆ, ವಾಲಿ ನಿಲಯ, ಬೀದರ
ದಿನಾಂಕ 25-12-2012

ಇವರಿಗೆ,
ಸನ್ಮಾನ್ಯ ಅರವಿಂದ ಜತ್ತಿ
ಅಧ್ಯಕ್ಷರು, ಬಸವ ಸಮಿತಿ
ಬೆಂಗಳೂರು.

ಮಾನ್ಯರೇ,

ವಿಷಯ : ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರ ಶತಮಾನೋತ್ಸವ ನಿಮಿತ್ತ ಪ್ರಕಟಿಸಿದ ಶರಣರ ವಚನಗಳ ಸಂಪುಟಗಳ ಕುರಿತು.

ಉಲ್ಲೇಖ :ದಿನಾಂಕ 24-12-2012ರಂದು ಬೀದರ ರಂಗಮಂದಿರದಲ್ಲಿ ಏರ್ಪಡಿಸಿದ ಲಿಂಗಾಯತ ಧರ್ಮದ ಜಾಗತೀಕರಣ ರಾಷ್ಟ್ರೀಯ ವಿಚಾರ ಸಂಕೀರಣದ ಸಮಾರೋಪ ಸಭೆಯಲ್ಲಿ ತಾವು ಮಾಡಿದ ಬೋಧನೆ.

*****

ವಿಶ್ವದ ಎಲ್ಲಾ ದಾರ್ಶನಿಕರು ವಂದನೆಗೆ ಅರ್ಹರು, ವಿಶೇಷವಾಗಿ ಭಾರತದಲ್ಲಿ ಋಷಿಮುನಿಗಳು ದಾರ್ಶನಿಕರು, ಮಹಾತ್ಮರು, ಶರಣರು, ಸಂತರು, ದಾಸರು, ಸೂಫಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಎಲ್ಲ ಕಡೆಗೆ ಆಯಾ ಸಮಯದಲ್ಲಿ ಬಂದು ಸಮಾಜಕ್ಕೆ ಸನ್ಮಾರ್ಗದ ದಾರಿಯನ್ನು ತೋರಿಸಿದ್ದಾರೆ.

12ನೇ ಶತಮಾನದಲ್ಲಿ ಶರಣರು ಸಾಮಾನ್ಯ ಜನರ ಭಾವನೆಗಳಿಗೆ ಸ್ಪಂದಿಸಿ ಇಡೀ ವಿಶ್ವಕ್ಕೆ ಒಂದು ಮಾದರಿಯ ವಚನ ಸಾಹಿತ್ಯವನ್ನು ಕೊಟ್ಟಿದ್ದಾರೆ. ಅವರ ಕಾಲದ ನಂತರ ಬರುಬರುತ್ತ ಅವರು ತೋರಿದ ದಾರಿಯನ್ನು ಬಿಟ್ಟು ಹೊಟ್ಟೆಪಾಡಿಗಾಗಿ ವಚನಗಳನ್ನು ಅನೇಕರು ದುರುಪಯೋಗ ಮಾಡಿಕೊಂಡ ನಿದರ್ಶನಗಳು ಸಿಗುತ್ತವೆ. ಎಲ್ಲಾ ದಾರ್ಶನಿಕರ ನಂತರ ಆಗಿದ್ದು ಇಷ್ಟೆ.

ಸನ್ಮಾನ್ಯ ಬಿ.ಡಿ.ಜತ್ತಿಯವರ ಬಗ್ಗೆ ನನಗೆ ತುಂಬ ಗೌರವವಿದೆ. ಭಾರತದ ಹಾಗೂ ವಿಶೇಷವಾಗಿ ಕರ್ನಾಟಕದ ಜನರು ಅವರನ್ನು ಮರೆಯುವಂತಿಲ್ಲ. ಅವರ ಜೀವನ ಕಾಲದಲ್ಲಿ ಶರಣ ಸಾಹಿತ್ಯಕ್ಕಾಗಿ ದುಡಿದು ಅವರು ರಾಷ್ಟ್ರದ ಉನ್ನತ ಸ್ಥಾನವಾದ ರಾಷ್ಟ್ರಪತಿ ಸ್ಥಾನದವರೆಗೆ ಪ್ರಗತಿಯನ್ನು ಸಾಧಿಸಿದರು ಇದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿ.

ಬಸವ ಸಮಿತಿ, ಬೆಂಗಳೂರು ಇವರು ಸನ್ಮಾನ್ಯ ಬಿ.ಡಿ.ಜತ್ತಿಯವರ ಶತಮಾನೋತ್ಸವದ ನಿಮಿತ್ತ ವಚನಗಳ 10 ಸಂಪುಟಗಳನ್ನು ಪ್ರಕಟಿಸಿದ್ದು ಸಂತೋಷದ ಸಂಗತಿ. ಈ ಸಂಪುಟಗಳ ಸಂಪಾದನೆಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಹಾಗೂ ಖ್ಯಾತ ಸಂಶೋಧಕರಾದ ಡಾ|| ಎಂ.ಎಂ.ಕಲ್ಬುರ್ಗಿಯವರು ಮಾಡಿರುತ್ತಾರೆ. ಈ ಸಂಪುಟಗಳನ್ನು ಪ್ರಕಟಿಸಿದ್ದು ಬಸವ ಸಮಿತಿ ಬೆಂಗಳೂರು, ಅದಕ್ಕೆ ಡಾ|| ಎಂ.ಎಂ.ಕಲಬುರ್ಗಿಯವರು ಸಂಪಾದನೆಯನ್ನು ಮಾತ್ರ ಮಾಡಿದ್ದಾರೆ. ಆದರೆ ಅದರಲ್ಲಿ ಹಾಕಿದ ಭಾವ ಚಿತ್ರದ ಬಗ್ಗೆ ತಮಗೆ ಯಾವುದೇ ರೀತಿ ಸಂಬಂಧವಿಲ್ಲವೆಂದು ಸಭೆಯಲ್ಲಿ ಪ್ರಕಟಿಸಿದ್ದಾರೆ. ಅಂದರೆ ಅದರ ಹೊಣೆ ಸಂಪೂರ್ಣವಾಗಿ ಬಸವ ಸಮಿತಿಯ ಮೇಲೆ ಇರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ಸಂಪುಟಗಳಲ್ಲಿ ಬಸವಣ್ಣನವರ ಭಾವಚಿತ್ರ ಎಲ್ಲಿಯೂ ಸಿಗುವುದಿಲ್ಲ. ಇದು ವಿಷಾದದ ಸಂಗತಿ. ಅದರಲ್ಲಿ ಕೇವಲ ಶ್ರೀ ಬಿ.ಡಿ.ಜತ್ತಿಯವರ ಭಾವ ಚಿತ್ರ ಹಾಕಲಾಗಿದೆ. ಮಹಾತ್ಮ ಬಸವಣ್ಣನವರ ಭಾವಚಿತ್ರ ಹಾಕಿದ ಮೇಲೆ ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರ ಭಾವಚಿತ್ರ ಹಾಕಿದರೆ ಯಾರಿಗೂ ಅಭ್ಯಂತರ ಇರುತ್ತಿರಲಿಲ್ಲ. ಮಹಾತ್ಮ ಬಸವಣ್ಣನವರ ಭಾವ ಚಿತ್ರ ಇಲ್ಲದಿದ್ದ ಕಾರಣ ಬಸವ

ಸಮಿತಿಯವರ ಕಾರ್ಯಕ್ಕೆ ಕಟುವಾಗಿ ಖಂಡಿಸಲಾಯಿತು. ಇದು ದ್ವೇಷದಿಂದಲ್ಲ ಶರಣರ ಸಾಹಿತ್ಯದ ಬಗ್ಗೆ ಇರುವ ಕಳಕಳಿ ಮತ್ತು ಅಭಿಮಾನಕ್ಕಾಗಿ.

ತಾವು 24-12-2012ರಂದು ರಂಗಮಂದಿರ ಬೀದರನಲ್ಲಿ ಭಾಷಣ ಮಾಡುವಾಗ ಸನ್ಮಾನ್ಯ "ಶ್ರೀ ಬಿ.ಡಿ. ಜತ್ತಿಯವರಿಂದಲೇ ಬಸವಣ್ಣನವರು ಬೆಳಕು ಕಂಡರು" ಎನ್ನುವಂತೆ ಮಾತಾಡಿದ್ದೀರಿ. ಜತ್ತಿಯವರಿದ್ದ ಕಾರಣ ಬಸವಣ್ಣನವರ ಪುತ್ಥಳಿ ಲೋಕಸಭೆಯಲ್ಲಿ ಸ್ಥಾಪಿಸಲಾಯಿತೆಂದು, ಹೊರದೇಶದವರಿಗೆ ಅವರ ಪ್ರಚಾರವಾಯಿತೆಂದು ಹಾಗೂ ಇಬ್ಬರು ಪ್ರಧಾನ ಮಂತ್ರಿಗಳು ಬಸವ ಸಮಿತಿಗೆ ಭೇಟಿ ನೀಡಿದರೆಂದು ಹೇಳಿದ್ದನ್ನು ನೋಡಿದರೆ, ಕೇವಲ ಜತ್ತಿಯವರಿಂದ ಬಸವಣ್ಣನವರಿಗೆ ಬೆಳಕು ಸಿಕ್ಕಿತೆಂದು ಹೇಳಿದಂತಾಗುತ್ತದೆ. ಪೂಜ್ಯ ಪುಟ್ಟರಾಜ ಗವಾಯಿಗಳು ಜಗಜ್ಯೋತಿ ಬಸವಣ್ಣನವರ ಹಿಂದಿ ಭಾಷೆಯಲ್ಲಿ ಬರೆದ ಪುರಾಣ ಮತ್ತು 106 ಶರಣರ ಚರಿತ್ರೆಯನ್ನು ಭಾರತದ ಪ್ರಪ್ರಥಮ ರಾಷ್ಟ್ರಪತಿಗಳಾದ ಶ್ರೀ ಡಾ|| ಬಾಬು ರಾಜೇಂದ್ರ ಪ್ರಸಾದರಿಗೆ ಕೊಟ್ಟಿದ್ದು, ದಾಖಲೆ ಇದೆ. ಶ್ರೀ ಜತ್ತಿಯವರು ಆವಾಗ ದಿಲ್ಲಿ ತಲುಪಿದ್ದಿಲ್ಲ. ಅವರು ದಿಲ್ಲಿ ಲೋಕಸಭೆ ತಲುಪುವ ಮುನ್ನವೆ ಮಹಾತ್ಮಾ ಬಸವಣ್ಣನವರ ಸಂದೇಶ ದಿಲ್ಲಿ ಲೋಕಸಭೆಗೆ ಮತ್ತು ರಾಷ್ಟ್ರಪತಿ ಭವನಕ್ಕೆ ತಲುಪಿತ್ತು ಎಂಬುದು ತಮಗೂ ಗೊತ್ತಿದ್ದ ಸಂಗತಿ. ಶರಣರ ವಚನಗಳನ್ನು 10 ಸಂಪುಟಗಳಲ್ಲಿ ಪ್ರಕಟಿಸಲು ಸರಕಾರದ ಧನಸಹಾಯ ಸಿಕ್ಕಿದೆ ಎಂಬುವುದು ಎಲ್ಲರಿಗೂ ಗೊತ್ತಿದೆ.

ಮಾನ್ಯ ಅರವಿಂದ ಜತ್ತಿಯವರೆ, ತಮಗೆ ಈ ಪತ್ರ ಬರೆಯುತ್ತಿರುವುದು ಬಸವ ಸಮಿತಿ ಅಧ್ಯಕ್ಷರೆಂದು ಶ್ರೀ ಬಿ.ಡಿ.ಜತ್ತಿಯವರ ಸುಪುತ್ರರೆಂದಲ್ಲ. ಒಂದು ಮಾತು ತಾವು ನೆನಪಿಡಬೇಕು. ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರು ಬಸವಣ್ಣನವರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿದ ಕಾರಣವೇ ಅವರು ರಾಷ್ಟ್ರಪತಿ ಸ್ಥಾನದವರೆಗೆ ತಲುಪಿದರು. ಶ್ರೀ ಜತ್ತಿಯವರಿಂದ ಮಹಾತ್ಮಾ ಬಸವಣ್ಣನವರು ಲೋಕಸಭೆಯವರೆಗೆ ತಲುಪಿದರೆಂಬುದು ಪ್ರಮಾದವಾಗುತ್ತದೆ. ಹೊರ ದೇಶದವರು ಬಸವಣ್ಣನವರನ್ನು ಗುರುತಿಸಿ ಶರಣರ ಬಗ್ಗೆ ಅನೇಕರು ಬೇರೆ ಬೇರೆ ಗ್ರಂಥಗಳನ್ನು ರಚಿಸಿದ್ದು ತಮಗೂ ಗೊತ್ತಿದ್ದ ಸಂಗತಿ. ತಾವು ಬೀದರಿನಲ್ಲಿ ಆಡಿದ ಮಾತು ಬಸವ ಸಮಿತಿಯ ಅಧ್ಯಕ್ಷರಾಗಿ ಮಾತನಾಡದೆ ಶ್ರೀ ಬಿ.ಡಿ.ಜತ್ತಿಯವರ ಮಗನಾಗಿ ಮಾತಾಡಿದ್ದೀರಿ. ತಮ್ಮ ಭಾಷಣ ಕೇಳಿದವರಿಗೆ ತುಂಬಾ ಬೇಸರವಾಯಿತು.

ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರ ಬಗ್ಗೆ ತಮಗಿಂತ ನಮಗೂ ಹೆಚ್ಚಿನ ಅಭಿಮಾನ ಇದೆ. ಆದರೆ ಅವರ ಬಗ್ಗೆ ಅಂಧಶ್ರದ್ಧೆ ಇಲ್ಲ. ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರು ಬೀದರಗೆ ಬಂದಾಗ ಅವರ ಜೊತೆಗೆ ಚರ್ಚಿಸಿದ್ದೇನೆ ಹಾಗೂ ತಾವು ಬೀದರಗೆ ಬಂದಾಗ ತಮ್ಮ ಜೊತೆಗೂ ಬಸವ ಸಮಿತಿಯ ಮುಖ್ಯ ಕಛೇರಿ ಬಸವ ಕಲ್ಯಾಣದಲ್ಲಿರಬೇಕೆಂದು ಹಾಗೂ ಬೆಂಗಳೂರಿನಲ್ಲಿರುವ ಕಟ್ಟಡ ಎಷ್ಟೇ ದೊಡ್ಡದಾಗಿದ್ದರೂ ಅದು ಶಾಖಾ ಕಛೇರಿಯಾಗಿರಬೇಕೆಂದು ಚರ್ಚಿಸಿದ್ದು ತಮಗೂ ನೆನಪಿರಬೇಕು. ಆದರೆ ಬಸವಕಲ್ಯಾಣದಲ್ಲಿ ಬಸವ ಸಮಿತಿಯ ಮುಖ್ಯ ಕಛೇರಿ ತೆರೆಯುವ ಕಾರ್ಯ ಈವತ್ತಿನವರೆಗೆ ಬಸವ ಸಮಿತಿಯವರು ಮಾಡಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ತಾವು ಬಸವ ಸಮಿತಿಯ ಅಧ್ಯಕ್ಷರಾಗಿ ವಿಚಾರ ಮಾಡಬೇಕು ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ತಾವು ಅಧ್ಯಕ್ಷರೆಂಬುದನ್ನು ಮರೆಯಬಾರದು. ಈಗಲಾದರೂ ತಮ್ಮ ಕಡೆಗೆ ಉಳಿದಿರುವ ಸಂಪುಟಗಳಲ್ಲಿ ಪೂಜ್ಯ ಬಸವಣ್ಣನವರ ಭಾವ ಚಿತ್ರ ಹಾಕಿ ಆ ಮೇಲೆ ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರ ಭಾವಚಿತ್ರ ಸಂಪುಟಗಳಲ್ಲಿ ಹಾಕಿದರೆ ಶ್ರೀ ಜತ್ತಿಯವರಿಗೆ ಹೆಚ್ಚಿನ ಗೌರವ ಬರುತ್ತದೆ, ಹಾಗೂ ಬಸವ ತತ್ತ್ವಾಭಿಮಾನಿಗಳಿಗೆ ಸಂತೋಷವಾಗುತ್ತದೆ.

ಸಂಪುಟಗಳಲ್ಲಿ ಕೇವಲ ಶ್ರೀ ಬಿ.ಡಿ.ಜತ್ತಿಯವರ ಭಾವಚಿತ್ರ ಇದ್ದರೆ ಕಾಲಾಂತರದಲ್ಲಿ ಆ ವಚನಗಳು ಅವರದ್ದೇ ಎಂಬ ತಪ್ಪು ಕಲ್ಪನೆ ಬರುವ ಸಂಭವ ಇರುತ್ತದೆ. ಏಕೆಂದರೆ ನಮ್ಮ ದೇಶದ ಪ್ರಗತಿಪರ ಸಂಶೋಧಕರು, ವಿಮರ್ಶಕರು ತುಂಬಾ ತಾರ್ಕಿಕವಾಗಿ ಚರ್ಚಿಸುತ್ತಾರೆ ಹಾಗೂ ಬರೆಯುತ್ತಾರೆ. ಅದಕ್ಕೆ ನಾವು ಮೊದಲಿನಿಂದಲೇ ಎಚ್ಚರಿಕೆಯಿಂದ ಹೆಜ್ಜೆ ಹಾಕಿದರೆ ತಪ್ಪಾಗಿ ಬರೆಯುವವರಿಗೆ ಹಾಗೂ ಬೇರೆ ಅರ್ಥ ಕಲ್ಪಿಸುವವರಿಗೆ ಅವಕಾಶ ಸಿಗುವುದಿಲ್ಲ.

ಬೀದರಿನ ರಂಗಮಂದಿರದಲ್ಲಿ ಕೇಳಿದ ಪ್ರಶ್ನೆ ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರ ಅಥವಾ ಬಸವ ಸಮಿತಿಯ ವಿರುದ್ಧವಾಗಿ ಅಲ್ಲ. ಶರಣರು ಸ್ಪಷ್ಟವಾಗಿ 12ನೇ ಶತಮಾನದಲ್ಲಿ ಅವಕಾಶ

Digitalized by e-Sahithya Documentation Forum
Sponsored by Sarayu Foundation Trust

ಕಲ್ಪಿಸಿಕೊಟ್ಟಿದ್ದಾರೆ. ಇದು ಬಸವತತ್ತ್ವಾಭಿಮಾನಿಗಳಿಗೆ ಹೆಮ್ಮೆಯ ಸಂಗತಿ. ತಾವು ಇನ್ನು ಮುಂದೆ ಬಸವ ಸಮಿತಿಯ ವತಿಯಿಂದ ಯಾವುದೇ ಶರಣರ ಗ್ರಂಥ ಪ್ರಕಟಿಸುವಾಗ ಪೂಜ್ಯ ಬಸವಣ್ಣನವರ ಮತ್ತು ಸಂಬಂಧಪಟ್ಟ ಶರಣರ ಭಾವ ಚಿತ್ರ ಹಾಕಲು ಮರೆಯದಂತೆ ಎಚ್ಚರಿಕೆಯಿಂದ ಪ್ರಕಟಿಸಬೇಕೆಂದು ವಿನಂತಿ.

ತಮ್ಮ ವಿಶ್ವಾಸಿ,
ಶಿವಶರಣಪ್ಪ ವಾಲಿ

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು.
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟುಬಂಡವಾಳ ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.03-03-2013

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010

ಬಸವ ವಚನಾಮೃತ

- ಮಾತಾಜಿ

1119. ಶರಣರ ಸಾಂಗತ್ಯ

ಅಯ್ಯಾ, ನಿಮ್ಮ ಶರಣರ ಕಂಡ ಕಡುಸುಖವನೇನೆಂಬೆನಯ್ಯಾ ?
ಅದು ಸಾಲೋಕ್ಯದಂತುಟಲ್ಲ, ಸಾಮೀಪ್ಯದಂತುಟಲ್ಲ.
ಸಾರೂಪ್ಯದಂತುಟಲ್ಲ, ಸಾಯುಜ್ಯದಂತುಟಲ್ಲ
ಲಿಂಗದೇವಯ್ಯಾ, ನಿಮ್ಮ ಶರಣರ ಚರಣದ
ದರುಶನ ಸ್ಪರುಶನದಿಂದಾನು ಧನ್ಯನಾದೆನು.

ದೇವಾ, ನಿಮ್ಮ ಚರಣಕ್ಕೆ ಶರಣಾದ ಶರಣರ ದರ್ಶನ ಅಪಾರ ಸುಖವನ್ನು ನೀಡುತ್ತದೆ ಇದು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಕ್ಕಿಂತ ಮಿಗಿಲಾದುದು. ನಿಮ್ಮ ಶರಣರ ಚರಣದ ದರ್ಶನ ಮತ್ತು ಸ್ಪರ್ಶನದಿಂದ ನಾನು ಧನ್ಯನಾದೆನು.

1120. ಶರಣರ ಮುನಿಸು ತಾಪಕಾರಕ

ಅಯ್ಯಾ, ನಿಮ್ಮ ಶರಣರ ಸಂಗವೆನಗೆ ಪರಮಸುಖವಯ್ಯಾ
ಅಯ್ಯಾ, ನಿಮ್ಮ ಶರಣರ ಅಗಲಿಕೆ ಎನ್ನ ಪ್ರಾಣವಿಯೋಗವಯ್ಯಾ
ಶಿವಶಿವಾ ಸಂತವಿಡುವೆನು, ಇನ್ನೆಂತಯ್ಯಾ ?
ಎನಗೇನು ಗತಿ ಲಿಂಗದೇವಾ ?
ನಿಮ್ಮ ಶರಣರ ಮುನಿಸು ಎನಗೆ ಬಿಡಿಸಬಾರದ ತೊಡಕು.

ಗುರು ಬಸವಣ್ಣನವರು ಶರಣಪ್ರೇಮಿಗಳು. ಸದಾಕಾಲವೂ ಶರಣರ ಸಂಗದಲ್ಲಿ ಇರಬೇಕೆಂದು ಹಂಬಲಿಸುವವರು. ಬಂದ ಶರಣರು ಅಗಲಿಹೋದರೆ ಅಪಾರ ವೇದನೆ ಅನುಭವಿಸುವರು, ಶರಣರು ದೂರವಾದರೆ ಅವರಿಗೆ ಪ್ರಾಣವೇ ಹೋದಂತೆ. ಹಾಗೆ ಹೋದಾಗ ಬಹಳ ಕಷ್ಟಪಟ್ಟು ಮನಸ್ಸನ್ನು ನಿಯಂತ್ರಿಸಿ, ಶಾಂತಿ(ಸಂತ) ತಂದುಕೊಳ್ಳುವರು. ಶರಣರು ಏನಾದರೂ ಕಾರಣಕ್ಕೆ ಮುನಿಸಿಕೊಂಡರೆ, ಮುನಿಸಿ ದೂರಹೋದರೆ ತುಂಬ ಚಟಪಟಿಕೆಗೆ ಒಳಗಾಗುವರು.

1121. ಭಕ್ತಿಯ ಲೋಪ

ಕೂಡಿದ ಕಾಲದಿಂದ ಕಡೆಮಟ್ಟ ಮಾಡಿದ ಲೇಸು.
ಒಂದು ದಿನ ಉದಾಸೀನವ ಮಾಡಿದಡೆ
ಅದೆಲ್ಲವೂ ವ್ಯರ್ಥವಾಗಿ ಹೋಹುದು ಕೇಳಯ್ಯಾ
ಸಾವಿರ ನೋಂಪಿಯ ನೋಂತು
ಒಂದು ಬಾರಿ ಹಾದರವನಾಡಿದರೆ
ಆ ನೋಂಪಿಯೆಲ್ಲವು ನೀರಲ್ಲಿ ನೆರೆದು ಹೋದಂತೆ ಕೇಳಯ್ಯಾ
ನಾನು ಎಷ್ಟು ಭಕ್ತಿಯ ಮಾಡಿದಡೇನು?
ನಿಮ್ಮ ಶರಣರ ಮನವೆಳ್ಳನಿತು ನೊಂದಡೆ
ಎನ್ನ ಭಕ್ತಿಯಭಿಮಾನ ಹೋಯಿತ್ತಲ್ಲಾ, ಲಿಂಗದೇವಾ
ನಿಮ್ಮ ಶರಣರ ಮುನಿಸನಾವ ಪರಿಯಲ್ಲಿ ತಿಳುಹುವೆ ಹೇಳಾ, ಎಲೆ ಪ್ರಭುವೆ.

ಕೂಡಿದ ಕಾಲದಿಂದ ಅಂದರೆ ಪರಸ್ಪರ ಪರಿಚಯವಾದ ಸಮಯದಿಂದ ದೀರ್ಘಕಾಲದವರೆಗೆ ಒಳ್ಳೆತನ್ನೇ ಮಾಡಿ, ಒಂದು ದಿನ ಉದಾಸೀನವ ಮಾಡಿದಡೆ ಮೊದಲು ಮಾಡಿದ ಒಳ್ಳೆಯದೆಲ್ಲವೂ ವ್ಯರ್ಥವಾಗಿ ಹೋಗುವುದು. ಸಾವಿರ ವ್ರತಗಳನ್ನು ಮಾಡಿ ಒಂದು ಸಲ ಅನೈತಿಕವಾದ ಕೆಲಸ ಮಾಡಿದರೆ ಆ ವ್ರತದ ಫಲವೆಲ್ಲವೂ ಹುಸಿಯಾಗಿ ಹೋಗುವುದು,

Digitalized by e-Sahithya Documentation Forum
Sponsored by Sarayu Foundation Trust

ಹೊಳೆಯಲ್ಲಿ ಹುಣಿಸಿ ಹಣ್ಣು ತೊಳೆದಂತೆ. ಎಷ್ಟು ಭಕ್ತಿಯನ್ನು ಮಾಡಿದರೂ ಶರಣರ ಮನಸ್ಸು ಸ್ವಲ್ಪ ನೊಂದರೆ ಆ ಭಕ್ತಿ ಎಲ್ಲವೂ ವ್ಯರ್ಥವಾಗಿ ಹೋಗುವುದು. ಶರಣರ ಮುನಿಸಿನ ಕಾರಣವನ್ನು ತಿಳಿಯುವುದು ಹೇಗೆ ಪ್ರಭುವೆ ?

1122. ಚನ್ನಬಸವಣ್ಣನವರ ಸಮಯೋಚಿತ ಸಲಹೆ

ನಂಬಿದೆನಯ್ಯಾ ನಾನು, ನಚ್ಚಿದೆನಯ್ಯಾ ನಾನು
ಬದುಕಿದೆನಯ್ಯಾ ನಾನು ನಿಮ್ಮ ಕೃಪೆಯಿಂದಲಿ
ಹಾಳು ಕುಳಿಯಲ್ಲಿ ಬಿದ್ದ ಪಶುವಿನ ಕರುವ ತೆಗೆದು
ತಾಯ ಮುಖವ ತೋರುವಂತೆ, ಪಾಪಕೂಪದಲ್ಲಿ ಬಿದ್ದವನನೆಬ್ಬಿಸಿ
ಲಿಂಗದೇವನ ಶರಣರ ಚರಣವ ತೋರಿ, ಎನ್ನನುಳುಹಿದನು
ಹೋದ ಜೀವಕ್ಕೆ ತನ್ನ ಕರುಣವೆಂಬ
ಮರುಜವಣಿಯ ಹಿಂಡಿ ಎತ್ತಿದನು
ಚನ್ನಬಸವಣ್ಣನಿಂದ ಬದುಕಿದೆನು

ಅಲ್ಲಮಪ್ರಭುದೇವರು ಮಹಾಮನೆಯ ಬಾಗಿಲಲ್ಲಿ ನಿಂತು ಗುರು ಬಸವಣ್ಣನವರು ಸ್ವಾಗತಿಸಲು ಬರಲಿಲ್ಲವೆಂದು ಮುನಿಸು ತಾಳಿ ಒಳಗೆ ಬರಲು ನಿರಾಕರಿಸಿದಾಗ ಚನ್ನಬಸವಣ್ಣನವರು ಗುರು ಬಸವಣ್ಣನವರ ಬಳಿ ಬಂದು ಪೂಜೆ ಮುಗಿಸಿ ಸ್ವಾಗತಿಸಲು ಬರಬೇಕೆಂದು ಮನವರಿಕೆ ಮಾಡಿಕೊಡುವರು. ಆಗ ಗುರು ಬಸವಣ್ಣನವರು ಹೇಳುವ ವಚನವಿದು.

"ಲಿಂಗದೇವಾ, ನಿಮ್ಮನ್ನು ನಂಬಿದ್ದೇನೆ, ದೃಢವಾಗಿ ನಚ್ಚಿದ್ದೇನೆ. ನಿಮ್ಮ ಅನುಗ್ರಹದಿಂದ ನಾನು ಬದುಕಿದೆ. ಹಾಳು ಗುಂಡಿಯಲ್ಲಿ ಕಾಲುಜಾರಿ ಬಿದ್ದ ಹಸುವಿನ ಕರುವ ಎತ್ತಿ ತೆಗೆದು, ತಾಯಿ ಹಸುವಿನ ಮುಖವ ತೋರುವಂತೆ, ಪಾಪ ಕೂಪದಲ್ಲಿ ಬಿದ್ದವನನ್ನು ಎಬ್ಬಿಸಿ ಶರಣರ ಚರಣವನ್ನು ತೋರಿ ನನ್ನನ್ನು ರಕ್ಷಿಸಿದನು. ಹೋದ ಜೀವಕ್ಕೆ ಸಂಜೀವಿನಿ ರಸವನ್ನು ಹಿಂಡಿ ಬದುಕಿಸುವಂತೆ ತನ್ನ ಕರುಣೆ ಎಂಬ ಮರುಜವಣಿಯನ್ನು ಚನ್ನಬಸವಣ್ಣನು ಹಿಂಡಿದನು."

ವಯಸ್ಸಿನಲ್ಲಿ ಕಿರಿಯರಿದ್ದರೂ ಚನ್ನಬಸವಣ್ಣನವರು ವಿವೇಕ ಜ್ಞಾನದಲ್ಲಿ ಹಿರಿಯರು. ಗುರು ಬಸವಣ್ಣನವರಿಗೆ ಸಮಯೋಚಿತವಾದ ಸಲಹೆಗಳನ್ನು ಕೊಡುವ ಬೌದ್ಧಿಕ ಸಂಗಾತಿ **(Intellectual Companion)** ಯಾಗಿದ್ದರು

1123. ಗುರು ಬಸವಣ್ಣನವರ ಕಿಂಕರತೆ

ಅಯ್ಯಾ, ನಿಮ್ಮ ಶರಣರೆನ್ನ ಪಾವನವ ಮಾಡಿ
ತಿಳುಹಿ ತಮ್ಮಂತೆ ಎನ್ನ ಮಾಡಿದ ಬಳಿಕ
ನಾನು ಅವರು ಮಾಡಿದಂತಾದೆನಯ್ಯಾ
ನಾನೊಬ್ಬನು ನಿಮ್ಮ ಶರಣರ ಬಳಿ ಬಳಿಯವನು
ಲಿಂಗದೇವನ ಶರಣರು ಮಚ್ಚಿ ಎನಗೊಲಿದಡೆ
ನಾನು ಬದುಕಿದೆನಲ್ಲದೆ, ಸಮರಸ ಸಂಗಕ್ಕೆ ಸರಿಯೆ
ಹೇಳಾ, ಚನ್ನಬಸವಣ್ಣಾ ?

"ಲಿಂಗದೇವಾ, ನಿಮ್ಮ ಶರಣರು ನನ್ನನ್ನು ಪಾವನ ಮಾಡಿದ್ದಾರೆ. ನನಗೆ ನಿಜ ಜ್ಞಾನವನ್ನು ನೀಡಿ(ತಿಳುಹಿ) ತಮ್ಮ ಮಟ್ಟಕ್ಕೆ ನನ್ನನ್ನು ಏರಿಸಿದ್ದಾರೆ. ಹೀಗಾಗಿ ನಾನು ಅವರು ರೂಪಿಸಿದಂತೆ ರೂಪುಗೊಂಡಿದ್ದೇನೆ. ಹೀಗಾಗಿ ನಾನು ಶರಣರ ಬಳಿಬಳಿಯ ಸೇವಕ. ಚನ್ನಬಸವಣ್ಣಾ ಶರಣರು ನನ್ನನ್ನು ಆದರಿಸಿ ನನಗೆ ಒಲಿದಿದ್ದಾರೆ. ಅದರಿಂದ ನಾನು ಬದುಕಿರುವೆನಲ್ಲದೆ ಅವರ ಜೊತೆಗೆ ಸಮಾನವಾಗಿ ಸಂವಾದ(ಚರ್ಚೆ) ಮಾಡುವುದಕ್ಕೆ ನಾನು ಅರ್ಹನಲ್ಲ." ಶರಣರನ್ನು ಮೇಲೇರಿಸಿ

ತಮ್ಮನ್ನು ಕೆಳಗಿಳಿಸಿಕೊಂಡು ಮಾತನಾಡುವ ಪ್ರವೃತ್ತಿ ಗುರುಬಸವಣ್ಣನವರದು.

1124. ಶರಣಪ್ರೇಮಿ ಗುರು ಬಸವಣ್ಣನವರು

ನಚ್ಚು ಮಚ್ಚಿನ ಶರಣರೆನ್ನ ಕಣ್ಣ ಮುಂದೆ ಬಂದು ನಿಂದಿರಲು
ಎನ್ನ ತನುವ ಬಗಿದು ಎನ್ನ ತನುವಿನೊಳಗಿಂಬಿಟ್ಟುಕೊಂಬೆನು
ಎನ್ನ ಮನವ ಬಗಿದು ಎನ್ನ ಮನದೊಳಗಿಂಬಿಟ್ಟುಕೊಂಬೆನು
ಎನ್ನ ಕಂಗಳು ಬಗಿದು ಎನ್ನ ಕಂಗಳೊಳಗಿಟ್ಟುಕೊಂಬೆನು[
ಲಿಂಗದೇವನ ಶರಣರೆನ್ನ ಒಡೆಯರಾಗಿ ಎನ್ನ ಮನೆಗೆ ಬಂದಡೆ
ಭಕ್ತಿಯ ಮಾಡುವೆನು ಕಾಣಾ, ಅಪ್ಪಣ್ಣಾ

ಗುರು ಬಸವಣ್ಣನವರಿಗೆ ಶರಣರ ಬರುವು ಅತ್ಯಂತ ಪ್ರಿಯ. ದೀಕ್ಷೆಯನ್ನು ಪಡೆದುಕೊಂಡ ನೂತನ ಶರಣರು ಬಂದು ಕಣ್ಣಮುಂದೆ ನಿಂತರೆ ಅವರನ್ನು ಅಂತರಂಗದಲ್ಲಿ ಇಂಬಿಟ್ಟುಕೊಳ್ಳುವ ತವಕ; ಕಣ್ಣು ತುಂಬಾ ನೋಡಿ ಕಣ್ಣಿನೊಳಗೆ ಇಂಬಿಟ್ಟುಕೊಳ್ಳುವರು, ಬಿಗಿದು ಅಪ್ಪಿಕೊಳ್ಳುವುದಷ್ಟೆ ಅಲ್ಲ ಶರೀರದಲ್ಲೇ ಅಡಗಿಸಿಕೊಳ್ಳುವಂತೆ ಭಾವಿಸುವರು; ಮನಸ್ಸನ್ನು ಬಗಿದು ಮನಸ್ಸಿನಲ್ಲಿ ಇಂಬಿಟ್ಟುಕೊಳ್ಳುವರು. ಶರಣರನ್ನೇ ಒಡೆಯರನ್ನಾಗಿ ಭಾವಿಸಿ ಅವರು ಮನೆಗೆ ಬಂದಾಗ ಭಕ್ತಿಯನ್ನು ಮಾಡುತ್ತೇನೆ ಎಂದು ಹಡಪದ ಅಪ್ಪಣ್ಣನವರಿಗೆ ಹೇಳುವರು.

ಗುರು ಬಸವಣ್ಣನವರು ವಿಕ್ರಮನಾಮ ಸಂವತ್ಸರದಲ್ಲಿ(1160) ಕಲ್ಯಾಣಕ್ಕೆ ಆಗಮಿಸಿ 36ವರ್ಷ ಅಲ್ಲಿದ್ದು ರಾಕ್ಷಸನಾಮ ಸಂವತ್ಸರ (1196)ರಲ್ಲಿ ಗಡಿಪಾರಾಗಿ ಕಲ್ಯಾಣದಿಂದ ಹೊರಟರು. ಈ 36ವರ್ಷಗಳ ಅವಧಿಯಲ್ಲಿ ಒಂದು ಲಕ್ಷದ ತೊಂಬತ್ತಾರು ಸಾವಿರ ಗಣಂಗಳು ಲಿಂಗಾಯತ ಧರ್ಮಾನುಯಾಯಿಗಳಾದರು. ಇಷ್ಟು ತ್ವರಿತವಾಗಿ ಯಾವ ಧರ್ಮವೂ ಬೆಳೆದಿಲ್ಲ. ಇದಕ್ಕೆ ಗುರು ಬಸವಣ್ಣನವರ ಶರಣ ಪ್ರೇಮವೇ ಮುಖ್ಯ ಕಾರಣ ಎಂದೆನ್ನಿಸುವುದು. ಅವರ ಪ್ರೇಮಕ್ಕೆ ಮಾರು ಹೋಗಿಯೇ ಅವರ ಸುತ್ತ ಶರಣರು ಧಾವಿಸಿದರೆಂದರೆ ಉತ್ಪ್ರೇಕ್ಷೆಯಲ್ಲ.

1125. ದಾಸೋಹಿ ಬಸವಣ್ಣ

ಆನೆ, ಭಂಡಾರ, ಲಾಯದ ಕುದುರೆಯ
ಬೇಡುವರಿಲ್ಲದೆ ಬಡವನಾದೆನಯ್ಯಾ
ಬೇಡುವುದೇನು ದೇವಾ?
ಮುನ್ನ ಬೇಡಿದೆ ಸಿಂಧುಬಲ್ಲಾಳನ ವಧುವನು;
ಇನ್ನು ಬೇಡಿದಡೆ ನಿಗಳವನಿಕ್ಕುವೆ,
ಬೇಡಿದ ಶರಣರಿಗೆ ನೀಡದಿರ್ದಡೆ
ತಲೆದಂಡ ಲಿಂಗದೇವಾ.

ಶರಣರು ಆನೆ, ಭಂಡಾರ, ಕುದುರೆ ಮುಂತಾಗಿ ಏನನ್ನೇ ಬೇಡಲಿ. ಅದನ್ನು ಕೊಡಲು ನಾನು ಸಿದ್ಧವಿದ್ದೇನೆ. ಆದರೆ ಬೇಡುವವರೇ ಇಲ್ಲದ ಕಾರಣ ನಾನು ಬಡವನಾದೆ. ಧರ್ಮ ಪ್ರಚಾರಕರಿಗೆ ಪ್ರಚಾರ ಕಾರ್ಯಕ್ಕಾಗಿ ಸಂಪತ್ತು, ಸಂಚಾರಕ್ಕಾಗಿ ಕುದುರೆ ಮುಂತಾಗಿ ಬೇಕು. ಅವರಿಗೆ ಅಗತ್ಯವಿರುವುದನ್ನು ಕೊಡಲು ನಾನು ಕಾತರಿಸುತ್ತಿರುವೆ. ಆದರೆ ಅವರೋ ಬೇಡಲು ಸಿದ್ಧರಿಲ್ಲ. ಬೇಡುವುದೆಂದರೆ ಅನೈತಿಕವಾದುದನ್ನು ಬೇಡುವುದಲ್ಲ. ಹಿಂದೆ ಜಂಗಮನೋರ್ವ ಸಿಂಧುಬಲ್ಲಾಳನ ಹೆಂಡತಿಯನ್ನು ಕೇಳಿದ. ಹಾಗೆ ಬೇಡಿದರೆ ನಾನು ಅಂಥವನ ಕೈಗೆ ಬೇಡಿ(ನಿಗಳ)ಯನ್ನು ಹಾಕಿಸುತ್ತೇನೆ. ಯೋಗ್ಯವಾದುದನ್ನು ಶರಣರು, ಜಂಗಮರು ಬೇಡಿದಾಗ ನೀಡದಿರ್ದಡೆ ನನ್ನ ತಲೆದಂಡ; ಇದು ನನ್ನ ಪ್ರತಿಜ್ಞೆ.

1126. ಮಹಾದಾಸೋಹಿ ಬಸವಣ್ಣನವರು

ಸಯದಾನ ಸವೆಯಿತ್ತೆಂದು ಬೆದರಿದೆನಾದಡೆ

Digitalized by e-Sahithya Documentation Forum
Sponsored by Sarayu Foundation Trust

ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಪಡಿಪದಾರ್ಥಂಗಳು ಅವಸರಕ್ಕೆ ಒದಗದೆ ಇದ್ದಲ್ಲಿ
ಮನವಳುಕಿ ಬೆದರಿದೆನಾದಡೆ ನಿಮ್ಮ ಭಕ್ತರಿಗೆ ಸಲ್ಲೆನು.
ಒಡವೆ ಸವೆದಡೆ ಒಡಲನೆ ಸಲಿಸುವೆನು.
ಕಡೆಮುಟ್ಟ ಪೂರೈಸದಿದ್ದೆನಾದಡೆ
ಮಡಿವಾಳ ಮಾಚಿತಂದೆಯ ಪಾದಸಾಕ್ಷಿಯಾಗಿ
ಲಿಂಗದೇವರಿಗೆ ದೂರವಹೆನು.

ಗುರು ಬಸವಣ್ಣನವರ ಮಹಾಮನೆಯಲ್ಲಿ ನಿತ್ಯ ದಾಸೋಹ ನಡೆಯುತ್ತಿತ್ತು. ಒಮ್ಮೊಮ್ಮೆ ಅದು ಬೃಹತ್ ಸ್ವರೂಪ ಪಡೆಯುತ್ತಿತ್ತು. ಅಂಥ ಸಂದರ್ಭ ಒದಗಿದಾಗ, "ಸಾಮಗ್ರಿಗಳು ಮುಗಿದು ಹೋದವು ಏನು ಮಾಡಲಿ ಎಂದು ಬೆದರಿದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪಡಿ ಪದಾರ್ಥಗಳು ಅವಸರಕ್ಕೆ ಒದಗದಿದ್ದರೂ ಮನಸ್ಸು ಅಳುಕಿ ಬೆದರುವುದಿಲ್ಲ. ಹಾಗೆ ಬೆದರಿದರೆ ನಿಮ್ಮ ಭಕ್ತರಿಗೆ ಸಲ್ಲೆನು. ನನ್ನ ಸಂಪತ್ತು ಸವೆದರೆ ನನ್ನ ಶರೀರವನ್ನೇ ಅರ್ಪಿಸುವೆನು. ಹಿಡಿದ ದಾಸೋಹವನ್ನು ಕಡೆಯವರೆಗೂ ಪೂರೈಸದಿದ್ದರೆ ಮಡಿವಾಳ ಮಾಚಿ ತಂದೆಯ ಪಾದ ಸಾಕ್ಷಿಯಾಗಿ ಲಿಂಗದೇವರಿಗೆ ದೂರವಾಗುವೆನು "ಎನ್ನುತ್ತಾರೆ ಗುರು ಬಸವಣ್ಣನವರು. 11ನೇ ಕಲ್ಯಾಣಪರ್ವದ ಬೃಹತ್ ದಾಸೋಹ ನೆನೆಸಿಕೊಂಡರೆ ಮೈಜುಮ್ಮೆನ್ನುತ್ತದೆ. ಅಂಥ ದಾಸೋಹ ನಡೆದಾಗ ಗುರು ಬಸವಣ್ಣನವರು ಈ ವಚನವನ್ನು ಬರೆದಿರಬಹುದು

1127. ಅನುಗ್ರಹದ ಸಮಯದ ಮನಸ್ಥಿತಿ

ಅರಿವಿಂದರಿದು ಏನುವ ತಟ್ಟದೆ ಮುಟ್ಟದೆ ಇದ್ದೆನಯ್ಯಾ.
ಅಂತರಂಗಸನ್ನಿಹಿತ ಬಹಿರಂಗ ನಿಶ್ಚಿಂತನಾಗಿದ್ದೆನಯ್ಯಾ.
ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ
ಗುರುಕಾರುಣ್ಯವ ಬಯಸುತ್ತಿದ್ದೆ, ಲಿಂಗದೇವಾ.

ಇದು ಬಹಳ ಮಹತ್ವಪೂರ್ಣವಾದ ವಚನ. ಗುರು ಬಸವಣ್ಣನವರಿಗೆ ಯಾರೂ ವ್ಯಕ್ತಿಗುರು (personal guru) ಎಲ್ಲ; ದೇವರೆ ಅವರ ಗುರು. ಅವರು ಅನುಗ್ರಹ ಪಡೆಯುವ ಸಂದರ್ಭ ಇಲ್ಲಿ ಚಿತ್ರಿತವಾಗಿದೆ. ಜ್ಞಾನದಿಂದ ದೇವರ ಸ್ವರೂಪವನ್ನು ಅರಿತು ಇಂದ್ರಿಯಗಳಿಂದ ಹೊರಗಿನ ವಿಷಯಗಳನ್ನು ತಟ್ಟದೆ ಮುಟ್ಟದೆ (ಪದಾರ್ಥ ತ್ಯಾಗ) ಸ್ಥಿರವಾಗಿ ಕುಳಿತಿದ್ದಾರೆ. ಅವರ ಅಂತರಂಗವು ಲಿಂಗದೇವನೊಡನೆ ಸಂಪರ್ಕವನ್ನು ಸಾಧಿಸಿ(ಸನ್ನಿಹಿತ)ದೆ. ಬಹಿರಂಗದಲ್ಲಿ ಸ್ಥಿರವಾಗಿ ಆಸನದಲ್ಲಿ ಕುಳಿತಿದ್ದಾರೆ. (ಹಾಲಿಗೆ. ಹೆಪ್ಪು ಹಾಕಿದಾಗ ಪಾತ್ರೆ ಸ್ಥಿರವಾಗಿರಬೇಕು. ಅಲ್ಲಾಡುತ್ತಿದ್ದರೆ ಮೊಸರು ಹೆಪ್ಪುಗಟ್ಟುವುದಿಲ್ಲ. ಹಾಗೆ ಅನುಗ್ರಹ ಅವತೀರ್ಣವಾಗುವಾಗ ಸ್ಥಿರವಾಗಿ ಕುಳಿತಿರಬೇಕು.) "ಸಮುದ್ರದ ಮೇಲ್ಪದರದಲ್ಲಿ ತೇಲುವ ಕಪ್ಪೆಚಿಪ್ಪು ಸ್ವಲ್ಪವೇ ಬಾಯ್ದೆರೆದು ಸ್ವಾತಿಯ ಹನಿಗಾಗಿ ಕಾಯುವಂತೆ ನಾನು ಗುರುಕಾರುಣ್ಯವ ಬಯಸುತ್ತಿರುವೆ." ಎನ್ನುತ್ತಾರೆ ಗುರು ಬಸವಣ್ಣನವರು

1128. ಗುರು(ದೇವ)ಕಳಾಯುಕ್ತ ಬಸವಣ್ಣ

ಗುರುಕಳೆಯಿಲ್ಲದೆ ವಾದಿಪೆನೆ ಸಿಂಹ ಶರಣನೊಂದಿಗೆ?
ಗುರುಕಳೆ ಬಸವನೆಂಬ ಗಜದಲ್ಲಿ ಸೇರಿದ ಕಾರಣ
ಲಿಂಗದೇವಯ್ಯನೆಂಬ ಸಿಂಹದೊಂದಿಗೆ ವಾದದ ಭರವು ಕೇಳಾ.

ನಂತರ ಒಮ್ಮೆ ಅನುಭವ ಮಂಟಪದಲ್ಲಿ ಚರ್ಚೆ ಬಂದಂತೆ ತೋರುತ್ತದೆ. ಗುರು–ಲಿಂಗ–ಜಂಗಮದ ಕರುಣೆ ಕುರಿತು ಒತ್ತಿ ಹೇಳುವ ಧರ್ಮಪಿತ ಬಸವಣ್ಣನವರಿಗೆ ಸ್ವತಃ ಗುರುವಿಲ್ಲ ಎಂದು ಯಾರೋ ಕೇಳಿದ್ದಾರೆ. ಅವರಿಗೆ ಹೀಗೆ ಉತ್ತರವನ್ನು ಅವರು ಕೊಡುತ್ತಾರೆ. "ಗುರುಕಳೆ ಇಲ್ಲದೆ ಸಿಂಹ ಸ್ವರೂಪರಾದ ಶರಣರೊಂದಿಗೆ ನಾನು ವಾದಿಸಬಲ್ಲೆನೆ? ಬಸವನೆಂಬ ಆನೆಯಲ್ಲಿ ಗುರುಕಳೆ

ಪ್ರವೇಶವಾಗಿರುವುದರಿಂದಲೇ ಸ್ವತಃ ಲಿಂಗದೇವನೆಂಬ ಸಿಂಹದೊಂದಿಗೆ ಸವಾಲು ಹಾಕಿ ಮಾತನಾಡಬಲ್ಲವನಾಗಿದ್ದೇನೆ."

1129. ನಿರ್ಭಕ್ತರಿಗೆ ಲಿಂಗದೊಲುಮೆಯುಂಟೆ?

ನಿಮ್ಮಾಶ್ರಯ ಭಕ್ತರಿಗೆ ಉಂಟು, ನಿರ್ಭಕ್ತರಿಗಿಲ್ಲವೆ?
ನಾವು ಭಕ್ತಿಯ ಮಾಡಿದಡೇನು;
ಭಕ್ತಿಯ ಮಾಡದೆ ಹೆಂಡಿರ ಕೂಡಿದಡೇನು
ಉಭಯರಲ್ಲಿ ಕೂಡಿ ಆನಂದಿಪ ಮೂರ್ತಿ ನೀವೆಯಲ್ಲದೆ
ಮತ್ತಾರಯ್ಯಾ ಲಿಂಗದೇವಯ್ಯಾ?

ಇದೊಂದು ವಿಲಕ್ಷಣ ವಚನ, ಬಸವ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಭಕ್ತರು ಎಂದರೆ ಸಂಸ್ಕಾರ ಹೊಂದಿದವರು, ದೀಕ್ಷೆ–ಗುರು ಕಾರುಣ್ಯ ಪಡೆದು ಸದಾಚಾರದ ಪಥದಲ್ಲಿ ಸಾಗಿದವರು. ನಿರ್ಭಕ್ತರು ಎಂದರೆ ಯಾವ ಸಂಸ್ಕಾರವನ್ನೂ ಹೊಂದದೆ ಬರೀ ಲೌಕಿಕ ಸುಖಭೋಗದಲ್ಲಿ ತೊಡಗಿದವರು. ಪ್ರತಿಯೊಬ್ಬ ಸಂಸಾರಿಯೂ ಸಂಸ್ಕಾರವನ್ನು ಪಡೆದೇ ಸಂಸಾರದಲ್ಲಿರಬೇಕು ಎಂಬುದೇ ಬಸವ ಸಿದ್ಧಾಂತ. ಈ ವಚನದಲ್ಲಿ ಇದಕ್ಕೆ ವಿರುದ್ಧವಾದ ವಿಚಾರವಿದೆ.
'ದೇವಾ, ನಿಮ್ಮಾಶ್ರಯ ಅನುಗ್ರಹ ಭಕ್ತರಿಗೆ ಮಾತ್ರ ಉಂಟು, ಭಕ್ತರಲ್ಲದವರಿಗೆ ಇಲ್ಲವೆ? ಭಕ್ತಿಯ ಮಾಡಿದರೇನು ಭಕ್ತಿಯ ಮಾಡದೆ ಹೆಂಡತಿಯೊಡನೆ ಸಂಸಾರ ಮಾಡಿದರೇನು ಇಬ್ಬರಲ್ಲೂ ಇದ್ದು ಆನಂದಿಸುವ ಮೂರ್ತಿ ನೀನೇ ಅಲ್ಲವೆ?' ಎಂದು ಪ್ರಶ್ನಿಸುವಂತಿದೆ.

ಈ ಅಭಿಪ್ರಾಯ ಪ್ರಶ್ನಾರ್ಥಕವಲ್ಲದೆ ಸೈದ್ಧಾಂತಿಕ ಉತ್ತರವಲ್ಲ. ವಚನಗಳ ಮೂಲಕ ಅನುಭವ ಮಂಟಪದಲ್ಲಿ ಶರಣರು ಸಂವಾದ ಮಾಡುತ್ತಿದ್ದರು. ಒಂದು ವಚನ ಪ್ರಶ್ನಾರ್ಥಕವಾಗಿದ್ದರೆ ಇನ್ನೊಂದು ಉತ್ತರವಾಗಿರುತ್ತಿತ್ತು. ಕೆಲವೊಮ್ಮೆ ದೇವರೇ ಇಲ್ಲ ಎಂದು, ಇಷ್ಟಲಿಂಗದ ಅಗತ್ಯವೇನಿದೆ? ಎಂದು ಮಾತನಾಡುವುದನ್ನು ಕಾಣುತ್ತೇವೆ. ಇವೆಲ್ಲ ಪ್ರಶ್ನಾರ್ಥಕ ವಚನಗಳು ಎಂದು ಅರ್ಥ ಮಾಡಬೇಕು. ಅದೇ ರೀತಿ ಇದೂ ಸಹ ಪ್ರಶ್ನಾರ್ಥಕ ವಚನ

1130. ಶರಣಾಗತಿ

ಅಯ್ಯಾ ನೀ ಮಾಡಲಾದ ಜಗತ್ತು, ಅಯ್ಯಾ ನೀ ಮಾಡಲಾದ ಸಂಸಾರ,
ಅಯ್ಯಾ ನೀ ಮಾಡಲಾದ ಮರೆವೆ, ಅಯ್ಯಾ ನೀ ಮಾಡಲಾದ ದುಃಖ
ಅಯ್ಯಾ ನೀ ಬಿಡಿಸಿದಡೆ ಬಿಟ್ಟಿತ್ತು ತಾಮಸ,
ಅಯ್ಯಾ ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿನ್ನೇಕೆ ಲಿಂಗದೇವಾ.?

"ಲಿಂಗದೇವಾ, ಇದು ನೀ ಮಾಡಲಾದ ಜಗತ್ತು, ನೀವೇ ಇದರ ಕರ್ತೃ. ಇದರಲ್ಲಿ ನೀನು ಸಂಸಾರ ಎಂಬ ನಾಟಕ ಹೂಡಿದ್ದೀಯೆ. ಮಾನವನಲ್ಲಿ ಮರೆವೆ, ಅಜ್ಞಾನ ಎಂಬುವ ಹೊದಿಕೆ ಹೊದ್ದಿಸಿದ್ದೀಯೆ. ಸಂಸಾರದಲ್ಲಿ ದುಃಖದ ಜಾಲವನ್ನು ಯೋಗ–ವಿಯೋಗವನ್ನು ಇಟ್ಟಿದ್ದೀಯೆ. ಇದೆಲ್ಲ ಕೂಡಿ ಒಂದು ದೊಡ್ಡ ಬಂಧನವಾಗಿ ಸುತ್ತಿಕೊಂಡಿದೆ. ಜಡವಾದ ತಾಮಸ ಜಾಲ ಇದಾಗಿದೆ. ನಿನ್ನ ಅನುಗ್ರಹವಿಲ್ಲದೆ ಈ ತಾಮಸಿಕ ಬಂಧನದಿಂದ ಪಾರಾಗಲು ಸಾಧ್ಯವಿಲ್ಲವಾಗಿದೆ. ಆದ್ದರಿಂದ ಇಂಥ ಮಾಯಾಜಾಲವನ್ನು ನಾನು ಬಿಡಿಸಿಕೊಂಡೆ ಎಂಬ ಹಮ್ಮಾದರೂ ನನಗೇಕೆ? ನೀನು ಕರುಣಿಸಿದ್ದರಿಂದ ಬಿಡಿಸಿಕೊಳ್ಳಲು ನನಗೆ ಸಾಧ್ಯವಾಗಿದೆ. " ಎಂಬ ಶರಣಾಗತಿಯನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

1131. ದೇವರು ತಾಯಿಯಂತೆ

ಹಾವು ಕಿಚ್ಚ ಮುಟ್ಟಿಹ ಶಿಶುವೆಂದು
ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ

Digitalized by e-Sahithya Documentation Forum
Sponsored by Sarayu Foundation Trust

ಇಷ್ಟೆಯೆನ್ನೊಡನೆ, ಲಿಂಗದೇವ.

ಈ ಪುಟ್ಟವಚನದಲ್ಲಿ ಲಿಂಗದೇವನ ಸ್ವರೂಪವನ್ನು ಹೃದಯಂಗಮವಾಗಿ ಗುರು ಬಸವಣ್ಣನವರು ಚಿತ್ರಿಸಿದ್ದಾರೆ. ಮಗುವಿಗೆ ತಾಯಿ ಅತ್ಯಂತ ಆತ್ಮೀಯ ವ್ಯಕ್ತಿ; ಮಗುವಿನ ಲಾಲನೆ ಪಾಲನೆ ಮಾಡುವುದಷ್ಟೇ ಅಲ್ಲ ಇನ್ನೂ ವಿವೇಕ ಜ್ಞಾನ ಹೊಂದದ ಮಗು ಹರಿದಾಡುತ್ತ ಹೋಗಿ ಹರಿದಾಡುವ ಹಾವನ್ನೇ ಹಿಡಿಯಬಹುದು; ಒಲೆಯಲ್ಲಿ ಉರಿಯುತ್ತಿರುವ ಕೊಳ್ಳಿಯನ್ನೇ ಹಿಡಿಯಬಹುದು ಎಂಬ ಆತಂಕದಿಂದ ಮಗುವಿನ ಬೆನ್ನುಹತ್ತಿ ತಾಯಿ ಓಡಾಡುವಳು. ಅದೇ ರೀತಿ ಕರುಣಾಳುವಾದ ಲಿಂಗದೇವನು ಸಹ ಭಕ್ತನ ಬೆನ್ನುಹತ್ತಿ ಇರುವನು. ಭಕ್ತನು ತಪ್ಪು ಮಾಡದಂತಿರಲು ಅವನ ಅಂತರಾತ್ಮ(ಒಳದನಿ)ವಾಗಿ ಎಚ್ಚರಿಸುವನು

1132. ಅಖಂಡ ನಿಷ್ಠೆ

ಎಡದ ಪಾದದಲೊದ್ದಡೆ ಬಲದ ಪಾದವ ಹಿಡಿವೆ.
ಬಲದ ಪಾದದಲೊದ್ದಡೆ ಎಡದ ಪಾದವ ಹಿಡಿವೆ.
ತ್ರಾಹಿ ತ್ರಾಹಿ ತಪ್ಪೆನ್ನದು, ಕ್ಷಮೆ ನಿಮ್ಮದು
ಲಿಂಗದೇವಾ, ನಿಮ್ಮ ಕರುಣದ ಕಂದ ನಾನು.

ತತ್ತ್ವನಿಷ್ಠರಾದ ಸಾಧಕರಿಗೆ ಎಡರು-ತೊಡರುಗಳು, ನಿಂದೆ-ವಿರೋಧಗಳು ಬಹಳ. ಆ ಸಂಕಷ್ಟಗಳಿಗೆ ಹೆದರಿ ಕೆಲವರು ತಾವು ಹಿಡಿದ ಧ್ಯೇಯವನ್ನೇ ಬಿಡುತ್ತಾರೆ. ಆದರೆ ನಿಷ್ಠಾವಂತ ಸಾಧಕರು ಹಾಗಲ್ಲ. ಈ ಸಂಕಷ್ಟಗಳು ದೇವನ ಪರೀಕ್ಷೆಗಳು ಎಂದು ತಿಳಿದು ಮನಸ್ಸನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುವರು. "ಎಡದ ಪಾದದಲ್ಲಿ ಒದೆಯುವೆಯಾ? ನಿನ್ನ ಬಲದ ಪಾದವನ್ನು ಹಿಡಿಯುತ್ತೇನೆ. ಬಲದ ಪಾದದಲ್ಲಿ ಒದೆಯುವೆಯಾ? ಎಡದ ಪಾದವನ್ನು ಹಿಡಿಯುತ್ತೇನೆ. ತಿಳಿದೋ ತಿಳಿಯದೆಯೋ ನಾನು ತಪ್ಪು ಮಾಡುತ್ತಿದ್ದಿರಬಹುದು. ನೀನು ಕ್ಷಮಾಗುಣನಿಧಿ ಕ್ಷಮೆಯನ್ನು ನೀಡು. ಲಿಂಗದೇವಾ, ನಾನು ನಿಮ್ಮ ಕರುಣೆಯ ಕಂದನೆಂದು ತಿಳಿ" ಎನ್ನುತ್ತಾರೆ ಗುರು ಬಸವಣ್ಣನವರು. ಸತ್ಯವಾದಿಗಳಿಗೆ ಸಂಕಷ್ಟಗಳು ಬಹಳ. ಅಂಥ ಸಂಕಷ್ಟ ಬಂದಾಗ ದೇವರಲ್ಲಿ ಅವಿಶ್ವಾಸವನ್ನು ತಾಳಬಾರದು ಎಂಬುದೇ ಈ ವಚನದ ಅಂತರಾರ್ಥ

1133. ಜಗದಾನಿಯ ಬೇಡಬೇಕು

ಹರಿಯ ಬೇಡುವಡೆ ಬಲೀಂದ್ರ ದಾನವನಿಕ್ಕಿದನು.
ಬ್ರಹ್ಮನ ಬೇಡುವಡೆ ಅವಗೆ ಶಿರವಿಲ್ಲ.
ಬೌದ್ಧನ ಬೇಡುವಡೆ ಅವಗೆ ಬುದ್ಧಿ ಸಮನಿಸದು
ಜಿನನ ಬೇಡುವಡೆ ಅವಗೆ ಉಡಲಿಲ್ಲ.
ಬೆನಕನ ಬೇಡುವಡೆ ಅವಗೆ ಕೋಡು ಮುರಿಯಿತ್ತು.
ಭೈರವನ ಬೇಡುವಡೆ ಅವ ಉಟ್ಟುದನಿಕ್ಕಿ ಆಡುತ್ತಿರ್ದನು.
ಅಭಯಕರ ಜಗಕ್ಕೆಲ್ಲಾ ಜಗದಾನಿಯ ಬೇಡುವೆನು
ಲಿಂಗದೇವಯ್ಯನ.

ಭಕ್ತಿಯಲ್ಲಿ ಬೇಡಿಕೆ ಇದೆ. ಬೇಡಿಕೆ ಎಂದಾಗ ಯಾರನ್ನು ಬೇಡಬೇಕು, ಏನನ್ನು ಬೇಡಬೇಕು ಮತ್ತು ಹೇಗೆ ಬೇಡಬೇಕು ಎಂಬ ವಿಷಯಗಳು ಬರುತ್ತವೆ. ಈ ವಚನದಲ್ಲಿ ಯಾರನ್ನು ಬೇಡಬೇಕು ಎಂಬುದರ ಪ್ರಸ್ತಾಪವಿದೆ. ಬಹಳಷ್ಟು ಜನರು ನಿಜವಾದ ದೇವರನ್ನು ಬೇಡುವುದಕ್ಕಿಂತಲೂ ದೇವತೆಗಳನ್ನು, ಕಾಲ್ಪನಿಕ ದೈವಂಗಳನ್ನು ಬೇಡುವುದೇ ಹೆಚ್ಚು.
ಹರಿಯನ್ನು ಬೇಡೋಣವೆ? ಅವನೇ ಬಲಿಚಕ್ರವರ್ತಿಯಿಂದ ಮೂರು ಅಡಿ ಭೂಮಿಯನ್ನು ದಾನವಾಗಿ ಪಡೆದ; ಬ್ರಹ್ಮನನ್ನು ಬೇಡೋಣವೆ? ಶಿವನು ಅವನ ತಲೆಯನ್ನು ಚಿವುಟಿ ಹಾಕಿದ ಬೌದ್ಧನ ಬೇಡುವುದೆ? ಅವನು ಸೃಷ್ಟಿಕರ್ತನನ್ನು ನಂಬಬೇಕು ಎಂಬ ಬುದ್ಧಿ ಇಲ್ಲದ ನಿರೀಶ್ವರವಾದಿ, ಜಿನನ ಬೇಡುವುದೆ? ಅವನು ದಿಗಂಬರನಾಗಿ ತಿರುಗುವವನು. ಗಣಪತಿಯನ್ನು ಬೇಡೋಣವೆ ಅವನ ಒಂದು ಕೋಡು ಮುರಿಯಿತು. ಭೈರವನ ಬೇಡುವೆನೆ? ಅವನು ತಾನು ಉಟ್ಟುದನ್ನೇ ಬಿಚ್ಚಿ

ಭಯಂಕರವಾಗಿ ಕುಣಿದನು. ಇವರನ್ನೆಲ್ಲ ಬೇಡಿ ನಿರಾಶನಾಗುವುದಿಲ್ಲ. ಅಭಯ ಹಸ್ತವನ್ನು ಹೊಂದಿದ, ಕಾರುಣ್ಯಮೂರ್ತಿ, ಜಗಕ್ಕೆಲ್ಲ ದಾನಿಯಾದ ಲಿಂಗದೇವಯ್ಯನ ಬೇಡುವೆನು." ಎನ್ನುತ್ತಾರೆ ಬಸವಣ್ಣನವರು.

1134. ಒಡೆಯನ ರಕ್ಷೆ

ಒಡೆಯರುಳ್ಳಾಳಿಂಗೆ ಕೇಡಿಲ್ಲ ಕಾಣಿರೊ!
ಊರೆನ್ನದೆ ಅಡವಿಯೆನ್ನದೆ, ಆಳನರಸಿ ಬಹ ಆಳಿದರುಂಟೆ?
ಜೋಳದವಾಳಿಂಗೆ ಬಿಜ್ಜಳಂಗೆ ಆಳಾದಡೇನು?
ವೇಳೆವಾಳಿಂಗೆ ಕೂಡಿಕೊಂಡಿಪ್ಪ ಲಿಂಗದೇವ.

ಒಡೆಯರು ಇರುವ ಆಳಿಗೆ ಕೇಡು ಆಗದು. ಏನೇ ತೊಂದರೆ ಬಂದರೂ ತಮ್ಮ ಆಳುಗಳನ್ನು ಒಡೆಯರು ರಕ್ಷಿಸುವರು. ಆದರೆ ಒಡೆಯರು ಸದಾ ಆಳಿನ ಹಿಂದೆ ಇರಲು ಸಾಧ್ಯವಿಲ್ಲ. ಊರೆನ್ನದೆ ಅಡವಿ ಎನ್ನದೆ ಬೆನ್ನುಹತ್ತಿ ಇರುವ ಒಡೆಯನೊಬ್ಬನುಂಟು ಅವನೇ ದೇವರು. ಜೋಳವನ್ನು ಸಂಪಾದಿಸಲು ನಾನು ಬಿಜ್ಜಳನ ಬಳಿ ಸೇವೆ ಮಾಡಿದರೇನು ನನ್ನ ನಿಜವಾದ ಒಡೆಯನು ಲಿಂಗದೇವ; ನನ್ನ ಸಮಯ ಸಂದರ್ಭಕ್ಕೆ ಅವನು ನನ್ನ ಜೊತೆಗೆ ಇರುವನು.

1135. ಲಿಂಗದೇವ ನಿಷ್ಠೆ

ಊರಮಾರಿಯ ಮೂಗ ಕೊಯ್ವೆ, ಆಲದ ಬ್ರಹ್ಮನ ಹಲ್ಲ ಕಳೆವೆ.
ಅಂತರದವ ನಮ್ಮ ಲೆಂಕ ನೋಡಾ.
ಆಕಾಶದವ ತಮ್ಮಾಳು ನೋಡಾ.
ಎಮಗೆ ಲಿಂಗದೇವಯ್ಯನುಂಟು.
ಕಟ್ಟು ಜವನೆಂಬ ತರುವಲಗೊರೆಯ.

ಶಿಷ್ಟ ದೇವತೆಗಳು, ಕ್ಷುದ್ರ ದೈವಂಗಳು ಎಂದು ಎರಡು ಬಗೆ. ದೇವತೆಗಳಿಗೆ ಹೂವು, ಹಣ್ಣು ನೀಡಿದರೆ ಮಾರಿ ಮುಂತಾದ ಕ್ಷುದ್ರ ದೈವಗಳಿಗೆ ಪ್ರಾಣಬಲಿ ಕೊಡುವರು. 'ಕ್ಷುದ್ರ ದೈವಂಗಳಿಗೆ ಪೂಜೆ ಮಾಡದಿದ್ದರೆ, ಪ್ರಾಣಿ ಬಲಿ ಕೊಡದಿದ್ದರೆ ಅವು ಊರಿಗೆ ರೋಗರುಜಿನ ತರುವವು. ಊರಿಗೆ ಕೆಡುಕಾಗುವುದು.' ಎಂದೆಲ್ಲ ಹೆದರಿಸಲಾಗುವುದು. ಮೇಲ್ಜಾತಿಯವರು ಲಿಂಗಾಯತ ಧರ್ಮಕ್ಕೆ ಸೇರಿದಾಗ ಹೋಮ-ಹವನ, ಜಾತಿ ಭೇದ ಬಿಡಲು ಕಷ್ಟ ಪಡುವಂತೆ ಕೆಳವರ್ಗದವರು ಮಾರಿ ಮಸಣಿ ಮುಂತಾದ ಪೂಜೆ ಬಿಡಲು ಹೆದರುತ್ತಿದ್ದರು. ಇಂಥವರಿಗೆ ಧೈರ್ಯತುಂಬಲು ಏಕದೇವೋಪಾಸಕರಾದ ಗುರು ಬಸವಣ್ಣನವರು ಹೇಳುತ್ತಾರೆ, "ಊರ ಮಾರಿಯ ಮೂಗ ಕೊಯ್ವೆ, ಆಲದ ಮರ ಸುತ್ತಬೇಡಿರಿ. ಅದರೊಳಗಿದ್ದಾನೆಂದು ಮೂಢರು ಹೆದರಿಸುವ ಆಲದ ಬ್ರಹ್ಮನ ಹಲ್ಲು ಕಿತ್ತು ಹಾಕುತ್ತೇನೆ, ಅಂತರ ಎಂಬ ದೈವ ನಮ್ಮ ಸೇವಕ, ಗಿಡಗಳಲ್ಲಿ ಹುದುಗಿರುತ್ತಾನೆಂದು ನಂಬಲಾಗುವ ಆಕಾಶದವ ನಮ್ಮ ಆಳು, ಹೆದರಬೇಡಿರಿ, ನಾವು ಲಿಂಗಪೂಜಕರು; ಸರ್ವಶಕ್ತನಾದ ಲಿಂಗದೇವಯ್ಯ ಎಮಗುಂಟು. ಯಮನೆಂಬ ದಿಟ್ಟ ಹುಡುಗ (ತರುವಲಿ)ನನ್ನು ಕಟ್ಟಿಹಾಕು." ಎನ್ನುತ್ತಾರೆ ಗುರು ಬಸವಣ್ಣನವರು.

1136. ಕೊಡುವಾತ ಸಂಗ, ಕೊಂಬಾತ ಸಂಗ ಕಾಣಿರೆಲವೊ

ಕೊಡುವಾತ ಸಂಗ ಕೊಂಬಾತ ಸಂಗ ಕಾಣಿರೆಲವೊ
ನರಮಾನವರು ಕೊಡುವರೆಂಬವರ ಬಾಯಲಿ
ಬಾಲಹುಳುಗಳು ಸುರಿಯವೆ ?
ಮೂರು ಲೋಕಕ್ಕೆ ನಮ್ಮ ಲಿಂಗದೇವಯ್ಯ ಕೊಡುವ ಕಾಣಿರೆಲವೊ.

Digitalized by e-Sahithya Documentation Forum
Sponsored by Sarayu Foundation Trust

ದೇವರು ಮಹಾದಾನಿ, ಜಗತ್ತನ್ನು ಕೊಟ್ಟಿದ್ದಾನೆ. ಮಾನವ ಜನ್ಮವನ್ನು ಕೊಟ್ಟಿದ್ದಾನೆ. ನಮಗೆ ನಿತ್ಯವೂ ಬೇಕಾದ ಅನ್ನಪಾನಾದಿಗಳನ್ನು ಕೊಡುತ್ತಾನೆ. ನಮ್ಮ ಬಳಿ ಇರುವ ಸಂಪತ್ತನ್ನು ದಾನದ ಮೂಲಕ ಪಡೆದುಕೊಳ್ಳುತ್ತಾನೆ. ದೇವನು ಕೊಡದಿದ್ದರೆ ನಮ್ಮ ತಂದೆ ತಾಯಿ ಕೊಡಬಲ್ಲರೆ ? ಇದನ್ನರಿಯದೆ ಅಜ್ಞಾನಿಗಳು ತಮ್ಮ ತಂದೆ-ತಾಯಿ ಕೊಟ್ಟರು ಎಂದು ಹೆಮ್ಮೆಯಿಂದ ಹೇಳುವುದುಂಟು. ನರ ಮಾನವರು ಕೊಡುವರು ಎಂಬುವರ ಬಾಯಲ್ಲಿ ಬಾಲಹುಳುಗಳು ಸುರಿಯದೆ ಇರುತ್ತವೆಯೆ ? ಮೂರು ಲೋಕಕ್ಕೆ ಕೊಡುವವನು ಸೃಷ್ಟಿಕರ್ತನಾದ ಲಿಂಗದೇವಯ್ಯ ಮಾತ್ರ ಎಂಬುದನ್ನು ಅರಿಯಿರಿ.

1137. ಜಂಗಮರು ತಿರುಕರಲ್ಲ.

ತಿರುಕರೆನ್ನದಿರಿ ಭೋ ಎನ್ನ ತಂದೆಗಳನು
ತಿರುಕರೆನ್ನದಿರಿ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿ ಭೋ ಎನ್ನ ದೇವರನು
ತಿರುಕರೆನ್ನದಿರಿ ಭೋ ಎನ್ನ ಒಡೆಯರನು
ದೇಹಿ ಎಂದಡೆ ನಾಸ್ತಿ ಎಂಬವರ ಬೇಹು
ನೋಡಬಂದ ಕಾಣಾ ಲಿಂಗದೇವ.

ಬುದ್ಧನು ಧರ್ಮ ಪ್ರಚಾರಕ ವ್ಯವಸ್ಥೆ (Missionery System)ಯನ್ನು ಭಿಕ್ಷುಗಳ ಮೂಲಕ ಬಳಕೆಗೆ ತಂದಂತೆ ಗುರು ಬಸವಣ್ಣನವರು ಜಂಗಮರ ಮೂಲಕ ಬಳಕೆಗೆ ತಂದರು. ಹೊಸ ಧರ್ಮವಾದ ಲಿಂಗಾಯತ ಹಬ್ಬಲಿಕ್ಕೆ ಈ ಜಂಗಮರ ಪಾತ್ರ ಮುಖ್ಯ ಕಾರಣವಾಯಿತು. ಇವರು ಜಾತ್ರೆಗಳು ನಡೆಯುವಲ್ಲಿ ಹೋಗಿ ಪ್ರಚಾರ ಮಾಡುತ್ತಿದ್ದರು. ಪಾಲ್ಕುರಿಕೆ ಸೋಮನಾಥ ಶ್ರೀಶೈಲದ ಜಾತ್ರೆಗೆ ಬಂದು ಮಾಹಿತಿ ಸಂಗ್ರಹಿಸಿ ಹೋಗಿ ಬಸವ ಪುರಾಣಮು ಕೃತಿಯನ್ನು ತೆಲುಗಿನಲ್ಲಿ ರಚಿಸುತ್ತಾನೆ. ಧರ್ಮ ಪ್ರಚಾರಕ ಜಂಗಮರೆಂದರೆ ತ್ಯಾಗಿಗಳು. ಊರೂರು ತಿರುಗುತ್ತ ಬೋಧೆ ಕಾಯಕ ಮಾಡುತ್ತಿದ್ದರು. ಅಂಥವರಿಗೆ ಆಶ್ರಯ, ಅನ್ನ ಅರಿವೆ ಕೊಡುವುದು ಭಕ್ತ(ಗೃಹಸ್ಥ)ರ ಕರ್ತವ್ಯವಾಗಿತ್ತು. ಅದನ್ನು ತಮ್ಮ ವಚನಗಳಲ್ಲಿ ಗುರು ಬಸವಣ್ಣನವರು ಒತ್ತಿ ಒತ್ತಿ ಹೇಳುತ್ತಾರೆ. ಜಂಗಮನಿಲ್ಲದ ಊಟ ಮಾಡಬಾರದು ಎನ್ನುತ್ತಾರೆ. ಅದರರ್ಥ ಒಬ್ಬ ಜಂಗಮರಿಗಾದರೂ ಉಣ್ಣಿಸಿ ಊಟ ಮಾಡಬೇಕೆಂಬುದು. ಈ ಜಂಗಮರು ಆರಂಭದ ದಿನಗಳಲ್ಲಿ (ಆಮೇಲೆ ಮಠಗಳು ಆದವು)ದೇವಾಲಯಗಳಲ್ಲಿ ಇದ್ದುಕೊಂಡು ಕೋರುಧಾನ್ಯ (ಹಿಟ್ಟು, ದವಸ, ಧಾನ್ಯ) ಭಿಕ್ಷೆ ಪಡೆದು, ಸ್ವಯಂಪಾಕ- ತಮ್ಮ ಕೈಯಿಂದ ಅಡಿಗೆ ಮಾಡಿಕೊಂಡು ಧರ್ಮಬೋಧೆ ಮಾಡುತ್ತಿದ್ದರು. ನಂತರ ಲಿಂಗಾಯತ ಧರ್ಮದ ಮಠಗಳು ಬೆಳೆದವು, ಲಿಂಗಾಯತ ಸಮಾಜ ಬೆಳೆಯಿತು.

ಬೋಧೆ ಕಾಯಕದ ಜಂಗಮರಿಗೆ ಭಿಕ್ಷೆ ಬೇಡದೆ ಅನ್ಯ ಮಾರ್ಗವಿರಲಿಲ್ಲ. ಅವರು ಭಿಕ್ಷೆಗೆ ಬಂದಾಗ ಅವರನ್ನು ತಿರುಕರು ಎಂದು ಜರಿಯುವ ಭಕ್ತರೇನು ಕಡಿಮೆ ಇರಲಿಲ್ಲ. ಅಂಥ ಭಕ್ತರಿಗೆ ಈ ವಚನದಲ್ಲಿ ಗುರು ಬಸವಣ್ಣನವರು ತಿಳಿ ಹೇಳಿದ್ದಾರೆ. ಅವರು (ಜಂಗಮರು) ನನ್ನ ತಂದೆಗಳು, ಬಂಧುಗಳು, ನನ್ನ ಪಾಲಿನ ದೇವರು, ನನ್ನ ಒಡೆಯರು, ಅವರನ್ನು ತಿರುಕರು ಎನ್ನಬೇಡಿರಿ, "ಅಯ್ಯಾ, ಕೊಡಿರಿ" ಎಂದು ಕೇಳಲಿಕ್ಕೆ ಬಂದಾಗ, "ಇಲ್ಲ, ನಡೆಯಿರಿ" ಎಂದು ಹೇಳುವ ಜನರ ಮೇಲೆ ಗೂಢಚರ್ಯೆ ಮಾಡಲು ಬಂದ ಬೇಹುಗಾರರು ಅವರು. ಭಕ್ತನು ಗೃಹಸ್ಥನಾಗಿ ಕಾಯಕವನ್ನು ಮಾಡುತ್ತ ಒಂದೆಡೆ ನೆಲೆಸುತ್ತಾನೆ. ಜಂಗಮನು ಹೆಣ್ಣುಮಣ್ಣುಹೊನ್ನುಗಳನ್ನು ತ್ಯಾಗ ಮಾಡಿ ಸಂಚರಿಸುತ್ತಾನೆ.

ನಿಂದಡೆ ಹೆಣ್ಣು ಹೊನ್ನು ಮಣ್ಣು ಹಿಡಿದು
ನೆಟ್ಟನೆ ಭಕ್ತನಾಗಿ ನಿಲ್ಲಬೇಕು

ಸುಳಿದಡೆ ಹೆಣ್ಣು ಹೊನ್ನು ಮಣ್ಣು ಬಿಟ್ಟು
ಜಂಗಮವಾಗಿ ಸುಳಿಯಬೇಕು
ನಿಂದು ಭಕ್ತನಲ್ಲದ ಸುಳಿದು ಜಂಗಮವಲ್ಲದ
ಉಭಯ ಭ್ರಷ್ಟರ ಮೆಚ್ಚುವನೇ ಗುಹೇಶ್ವರ.

ಹೀಗಾಗಿ ತ್ಯಾಗಿಯಾದ ಜಂಗಮನ ಸಂರಕ್ಷಣೆ ಭಕ್ತನ ಕರ್ತವ್ಯ. ಭಕ್ತನು ಜಂಗಮರನ್ನು ಅರ್ಥಾತ್ ತ್ಯಾಗಿಗಳನ್ನು ಭಿಕ್ಷುಕರು ಎಂದು ಹಳಿಯಬಾರದು.

1138. ಛಲವಂತ ಶರಣ

ಹದಿನಾರಿದ್ದಡೆ ಎಂಟು ಮಾಡುವ ಸಂಗಯ್ಯ ದೇವರು
ಎಂಟಿದ್ದಡೆ ನಾಲ್ಕ ಮಾಡುವ ಸಂಗಯ್ಯ ದೇವರು
ನಾಲ್ಕಿದ್ದಡೆ ಎರಡು ಮಾಡುವ ಸಂಗಯ್ಯ ದೇವರು
ಎರಡಿದ್ದಡೆ ಒಂದ ಮಾಡುವ ಸಂಗಯ್ಯ ದೇವರು
ಆ ಒಂದು ಇಲ್ಲವೆಂದು ಮಾಡುವ ಸಂಗಯ್ಯದೇವರು
ತಿರಿಕನ ಶೋಭಿತನ ಮಾಡುವ ಸಂಗಯ್ಯ ದೇವರು
ತಿರಿತನ ಹೋದಡೆ ಹುಟ್ಟದೆನಿಸುವ ಸಂಗಯ್ಯ ದೇವರು
ಇದಾವುದಕ್ಕೂ ಸೆಡೆಯದಿದ್ದಡೆ
ಲಿಂಗದೇವರು ತನ್ನಂತೆ ಮಾಡುವ.

ಸತ್ಯವಾದಿಗಳಿಗೆ ಪರೀಕ್ಷೆ ಬಹಳ. ಸಮಯಸಾಧಕರಿಗೆ ಲೌಕಿಕವಾಗಿ ತೊಂದರೆ ಕಡಿಮೆ. ಸತ್ಯಾಪೇಕ್ಷಿಗಳನ್ನು ದೇವನು ತುಂಬಾ ಪರೀಕ್ಷಿಸುವನು. ಹದಿನಾರಿದ್ದಡೆ ಎಂಟು ಮಾಡುವ, ಎಂಟಿದ್ದರೆ ನಾಲ್ಕು ಮಾಡುವ, ನಾಲ್ಕಿದ್ದರೆ ಎರಡು ಮಾಡುವ, ಎರಡಿದ್ದರೆ ಒಂದು ಮಾಡುವ ಕಡೆಗೆ ಆ ಒಂದನ್ನು ಇಲ್ಲವಾಗಿ ಮಾಡುವ. ದೇವರು ಅನುಗ್ರಹಿಸಿದರೆ ಭಿಕ್ಷುಕನನ್ನು ಸಿರಿವಂತನನ್ನಾಗಿ ಮಾಡುವನು. ಕೆಲವೊಮ್ಮೆ ಭಿಕ್ಷುಕನನ್ನು ಇನ್ನೂ ಹೀನಸ್ಥಿತಿಗೆ ಹುಟ್ಟಲೇಬಾರದಾಗಿತ್ತು ಎನ್ನುವ ದೀನಸ್ಥಿತಿಗೆ ಇಳಿಸುವನು. ಈ ಯಾವ ಕಷ್ಟಗಳಿಗೂ ಹೆದರದೆ ಇದ್ದರೆ ಲಿಂಗದೇವನು ಕಡೆಗೆ ಅನುಗ್ರಹ ನೀಡಿ ತನ್ನಂತೆ ಮಾಡುವ.

1139. ಬೇಡದ ಭಕ್ತಿ.

ಹಿಂದೆ ಸಂದ ಭಕ್ತರಂತಾನೊಂದೊಂದ ಬೇಡಿ ಕಾಡುವವನಲ್ಲ.
ಹಿಂದೆ ಬೆನ್ನಲ್ಲಿ ಬಂದು ಬಳಲಿದೆ
ಇನ್ನೊಂದ ಬೇಡೆನಂಜದಿರಂಜದಿರಯ್ಯಾ
ಆಶಾಪಾಶ ಎನ್ನಲ್ಲುಳ್ಳಡೆ ಲಿಂಗದೇವಾ ನಿಮ್ಮಾಣೆ.

ಹಿಂದೆ ಆಗಿ ಹೋಗಿರುವ ಭಕ್ತರಂತೆ ನಾನು ಒಂದೊಂದನ್ನು ಬೇಡಿ ದೇವಾ, ನಿನ್ನನ್ನು ಕಾಡುವವನಲ್ಲ. ಹಿಂದಿನ ಅನಂತ ಜನ್ಮಗಳಲ್ಲಿ ಬಂದು ಬಳಲಿದ್ದೇನೆ. ಈ ಜನ್ಮದಲ್ಲಿ ಇನ್ನೇನೂ ಬೇಡುವುದಿಲ್ಲ. ಏನು ಬೇಡಿ ಬಿಡುವೆನೋ ಎಂದು ಅಂಜಿ ಓಡದಿರು. ಆಶೆಯೆಂಬ ಪಾಶ ಎನ್ನಲ್ಲಿ ಇದ್ದರೆ ಲಿಂಗದೇವಾ, ನಿಮ್ಮಾಣೆಯಾದೀತು.

ವಚನಕಾರರ ಆಶಯವೆಂದರೆ ದೇವರನ್ನು ಏನೂ ಬೇಡಬಾರದು; ನಮಗೆ ಅಗತ್ಯವಿರುವುದನ್ನು ಸರ್ವಜ್ಞನಾದ ಅವನೇ ಕೊಟ್ಟು ಬಿಡುವನು.

1140. ಅಂಜುವ ದೇವ

ಅಂಜದಿರಂಜದಿರು ಹಂದೆ ; ಓಡದಿರು ಓಡದಿರು ಹೇಡಿ ;
ಆಳಿನಾಳು ಕೀಳಾಳು ಬಹಗೆ

Digitalized by e-Sahithya Documentation Forum
Sponsored by Sarayu Foundation Trust

ಹೋಗದಿರು ಹೋಗದಿರು ಕೂಡಲಸಂಗಮದೇವಾ.

ಸಾಧನಾವಸ್ಥೆಯಲ್ಲಿರುವ ಸಾಧಕನಿಗೆ ಸಗುಣ ಸಾಕ್ಷಾತ್ಕಾರದ ಗಟ್ಟಿ ಅನುಭವಕ್ಕೆ ಮೊದಲು ಆಕಾರ ಸುಳಿದು ಸುಳಿದು ಹೋಗುತ್ತದೆ. ದರ್ಶಿಸಬೇಕು, ಸ್ಪರ್ಶಿಸಬೇಕು. ಆ ರೂಪ(Audio-visual form)ದ ವಾಣಿಯನ್ನು ಕೇಳಬೇಕು ಎಂದು ಸಾಧಕನು ಹಂಬಲಿಸುವಾಗಲೇ ಅದು ಕಣ್ಮರೆಯಾಗುತ್ತದೆ. ಹೀಗೆ ಸುಳಿದು ಹೋಗುವ ಆಕಾರವನ್ನು ಕಳೆದುಕೊಳ್ಳುತ್ತಲೇ ಬಸವರಸರಿಗೆ ಸಂದೇಹ ಉಂಟಾಗುತ್ತದೆ. "ನಾನೇನಾದರೂ ಅಸಾಧ್ಯವಾದುದನ್ನು ಬೇಡಬಹುದು ಎಂಬ ಭಯವಾಗಿ ಶಿವನು ಓಡುತ್ತಿರಬಹುದೆ ? ಅಂಜದಿರು ಹೇಡಿಯೆ ! ಓಡದಿರು!! ನಾನು ಶರಣರ ಸೇವಕ, ಅವರ ಆಳು ನಿನ್ನನ್ನು ಬೇಡುವುದಿಲ್ಲ. ಆದ್ದರಿಂದ ಹೋಗದಿರು ಸಂಗಮನಾಥ."

1141. ಏನೂ ಬೇಡೆ (ಬೇಡಲಾರೆ)

ಅಂಜದಿರು ಅಳುಕದಿರು, ಕುಂದದಿರು, ಕುಸಿಯದಿರು.
ಏನೋ ಎಂತೋ ಎಂದು ಚಿಂತಿಸದಿರು
ನಿನ್ನ ನಾನೇನುವನೂ ಬೇಡೆ, ಕೂಡಲಸಂಗಮದೇವಾ.

ಹಿಂದಿನ ವಚನದ ಭಾವವೇ ಇಲ್ಲಿಯೂ ಅಭಿವ್ಯಕ್ತವಾಗಿದೆ. "ಕೂಡಲಸಂಗಮ ದೇವಾ, ನಿನ್ನಿಂದ ಅಸಾಧ್ಯವೂ, ಅಸಂಭವನೀಯವೂ ಆದ ಅಪೇಕ್ಷೆಯನ್ನು ನಿನ್ನ ಮುಂದೆ ಇಡುವೆನೆಂದು ಅಂಜದಿರು, ಅಳುಕದಿರು ; ಕೊಡಲು ಆಗುವುದೋ ಇಲ್ಲವೋ ಎಂದು ಕುಂದದಿರು, ಕುಸಿಯದಿರು. ದರ್ಶನ ಕೊಟ್ಟರೆ ಏನೋ ಎಂತೋ ಎಂದು ಚಿಂತಿಸದಿರು. ನಿನ್ನ ನಾನೇನುವನೂ ಬೇಡೆ, ದರ್ಶನ ಕೊಡು ಸಾಕು."

1142. ಶರಣರು ಕರುಳಿಲ್ಲದ ಕಲಿಗಳು

ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು;
ಧನ ನೋಡಾ ಬಡವರು, ಘನಮನಸಂಪನ್ನರು;
ಲಿಂಗದೇವನ ಶರಣರು ಕರುಳಿಲ್ಲದ ಕಲಿಗಳು
ಆರಿಗೆ ಉಪಮಿಸಬಹುದು ?

ಈ ವಚನವು ಎರಡು ಸನ್ನಿವೇಶಗಳಲ್ಲಿ ಹೇಳಿರಬಹುದಾದ ವಚನ.1. ಆಯ್ದಕ್ಕಿ ಮಾರಯ್ಯನ ಪ್ರಸಂಗ, 2 ಮೋಳಿಗೆ ಮಾರಯ್ಯನ ಪ್ರಸಂಗ.

ಒಂದು ದಿವಸ ಅನುಭವ ಮಂಟಪದಲ್ಲಿ ಚರ್ಚೆ ನಡೆಯುತ್ತಿರುತ್ತದೆ. ಅಂದಿನ ಪ್ರಮುಖ ವಕ್ತಾರ ಆಯ್ದಕ್ಕಿ ಮಾರಯ್ಯ. ಅವನು ಕಾಯಕದ ಮಹತ್ವ ಕುರಿತು ಮಾತನಾಡುತ್ತಿರುತ್ತಾನೆ. ಕಾಯಕಕ್ಕೆ ಹೋಗುವ ಸಮಯ ಮೀರುತ್ತಿದೆ. ಆದರೆ ಚರ್ಚೆಯಲ್ಲಿ ಮಾರಯ್ಯ ತನ್ಮಯನಾಗಿ ಕಾಯಕಕ್ಕೆ ಹೋಗಲು ಮರೆತಿದ್ದಾನೆ. ಆ ಸಮಯದಲ್ಲಿ ಆತನ ಧರ್ಮಪತ್ನಿ ಲಕ್ಕಮ್ಮ ಅನುಭವ ಗೋಷ್ಠಿಯಲ್ಲಿ ಪಾಲುಗಾರಳಾಗಲು ಬರುತ್ತಾಳೆ. ಗಂಡನು ಕಾಯಕಕ್ಕೆ ಹೋಗದೆ ಕಾಯಕದ ಬಗ್ಗೆ ಮಾತನಾಡುತ್ತಿದ್ದಾನೆ ! ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ ಎಂದು ಎಚ್ಚರಿಸಿ ಕಳಿಸುತ್ತಾಳೆ. ಅಂದಿನ ಕಾಯಕವನ್ನು ಹತ್ತಿರದಲ್ಲೇ ಮಾಡೋಣ ಎಂದು ಮಹಾಮನೆಯ ಉಗ್ರಾಣದ ಬಳಿ ಹೋಗುತ್ತಾನೆ. ಒಂದೇ ಕಡೆ ಜಾಸ್ತಿ ಅಕ್ಕಿ ಬಿದ್ದಿದೆ. ಕಂಡು ಸಂತೋಷವಾಗಿ ಬೇಗಬೇಗನೆ ಬಾಚಿಕೊಂಡು ಬಟ್ಟೆಯಲ್ಲಿ ಕಟ್ಟಿಕೊಂಡು ಪುನಃ ಅನುಭವ ಮಂಟಪಕ್ಕೆ ಬಂದು ಅಕ್ಕಿನ ಗಂಟನ್ನು ಕೊಟ್ಟು, "ನೀನು ಹೋಗಿ ಅಡಿಗೆ ಮಾಡು. ನಾನು ಜಂಗಮರನ್ನು ಕರೆದುಕೊಂಡು ಬಂದು ಬಿಡುತ್ತೇನೆ." ಎನ್ನುವನು. ಅಕ್ಕಿಯ ಪ್ರಮಾಣ ಅಗತ್ಯಕ್ಕಿಂತ ಜಾಸ್ತಿ ಇದೆ. ಆಶ್ಚರ್ಯದಿಂದ "ಈಸಕ್ಕಿಯಾಸೆ ನಿಮಗೇಕೆ ಮಾರಯ್ಯ ?" ಎಂದು ಕೇಳಿ ಅಲ್ಲಿಯೇ ಹೋಗಿ ಸುರಿದು ಬನ್ನಿ ಮಾರಯ್ಯ ಎಂದು ಕಳಿಸುವಳು. ಉಭಯತರ ನಡುವೆ ನಡೆಯುವ ಸಂಭಾಷಣೆ ಅದ್ಭುತವಾಗಿದೆ. ವಿಷಯಾಂತರವಾಗುವುದೆಂದು ಇಲ್ಲಿ ಕೊಡುತ್ತಿಲ್ಲ.

ಇಲ್ಲಿ ಒಂದು ಸಂದೇಹ ಉಂಟಾಗಬಹುದು. ಆಯ್ದ ಅಕ್ಕಿಯನ್ನು ಪುನಃ ಸುರಿದು ಬರುವುದು ಸರಿಯೆ ? ಮಾರಯ್ಯನವರು ಅಕ್ಕಿ ಆಯುವ ಕಾಯಕ. ಗದ್ದೆಗಳಲ್ಲಿ ತೆನೆ ಕೊಯ್ದಾಗ, ಕಣದಲ್ಲಿ ರಾಶಿ ಮಾಡಿದಾಗ, ಉಗ್ರಾಣದಿಂದ ಅಡಿಗೆ ಮನೆಗೆ ಅಕ್ಕಿಯ ಚೀಲ ಒಯ್ಯುವಾಗ ಕಾಳು ಉದುರಿರುತ್ತವೆ. ಅವು ಮಣ್ಣಿನಲ್ಲಿ ಬೆರೆತು ಹಾಳಾಗಿ ಹೋಗಬಾರದು ಎಂದು ಅವನ್ನು ಆಯುವ ಕಾಯಕವನ್ನು ಮಾರಯ್ಯನವರು ಕೈಗೊಂಡಿದ್ದರು. ಅವರಂತೆ ಇನ್ನೂ ಕೆಲವರು ಇದೇ ಕಾಯಕವನ್ನು ಕೈಗೊಂಡಿದ್ದಿರಬಹುದು. ಮಾರಯ್ಯನವರು ಹೆಚ್ಚಿನ ಪ್ರಮಾಣದಲ್ಲಿ ಬಾಚಿಕೊಂಡು ತಂದರೆ ಅದೇ ಕಾಯಕ ಮಾಡುವ ಮತ್ತೊಬ್ಬ ಶರಣನಿಗೆ ತೊಂದರೆಯಾಗದೆ ? ಎಂಬ ಚಿಂತನೆ ಲಕ್ಕಮ್ಮನದು. "ಅಲ್ಲಿಯೇ ಸುರಿದು ಬನ್ನಿ" ಎಂಬಲ್ಲಿ ಇನ್ನೊಬ್ಬರ ತುತ್ತು ಕಸಿದುಕೊಳ್ಳಬಾರದು "ಹೆಚ್ಚುವರಿ ಅಕ್ಕಿಯ ಆಸೆ ನಿಮಗೇಕೆ?" ಎಂಬಲ್ಲಿ ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸಬಾರದು ಎಂಬ ಚಿಂತನೆ ಅಡಗಿದೆ.

ನಂತರ ಗುರುಬಸವಣ್ಣನವರೇ ಆದಿಯಾಗಿ ಅಸಂಖ್ಯಾತರಿಗೆ ಪ್ರಸಾದ ಸ್ವೀಕಾರಕ್ಕೆ ಬರಲು ಆಹ್ವಾನಿಸುತ್ತಾರೆ. ಪ್ರಸಾದ ಸ್ವೀಕಾರದ ನಂತರ ಅಭಿಮಾನದಿಂದ ಗುರು ಬಸವಣ್ಣನವರು ಈ ವಚನವನ್ನು ನುಡಿಯುತ್ತಾರೆ.

"ಮನೆ ನೋಡಿದರೆ ಸಣ್ಣದು, ಮನಸ್ಸು ನೋಡಿದರೆ ಬಹು ವಿಶಾಲ. ಧನದ ಸಂಪತ್ತಿನಲ್ಲಿ ಬಡವರು. ಮನದ ಸಂಪತ್ತಾದ ಆಚಾರ, ಅರಿವು, ಅನುಭಾವದಲ್ಲಿ ಸಿರಿವಂತರು. ಲಿಂಗದೇವನ ಶರಣರು ಕರುಳಿಲ್ಲದ ಕಲಿಗಳು ಅಂದರೆ ನಿರ್ದಾಕ್ಷಿಣ್ಯಪರರಾದ ಸತ್ಯವಾದಿಗಳು. ಇವರೊಡನೆ ಹೋಲಿಸಲು ಯಾರೂ ಸಿಗರು."

ಇಲ್ಲಿ ಒಂದು ಸಂದೇಹ ಉದ್ಭವವಾಗುತ್ತದೆ. ಅಂದಂದು ದುಡಿದು, ಅಕ್ಕಿ ಆಯ್ದು ತರುವ ಮಾರಯ್ಯ-ಅವನ ಹೆಂಡತಿ ಲಕ್ಕಮ್ಮ ಅದು ಹೇಗೆ ಅಸಂಖ್ಯಾತ ಶರಣರಿಗೆ ಪ್ರಸಾದ ದಾಸೋಹ ಮಾಡಿಸಲು ಸಾಧ್ಯವಾಯಿತು ? ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದೊಡೆ ಎಂದು ಪ್ರತಿಜ್ಞೆಗೈದ ಗುರು ಬಸವಣ್ಣನವರು ಅದು ಹೇಗೆ ನಿತ್ಯವೂ ಸಾವಿರಾರು ಜನಕ್ಕೆ ದಾಸೋಹ ಮಾಡಿಸುತ್ತಿದ್ದರು? ವೈಯಕ್ತಿಕವಾಗಿ ಕೌಟುಂಬಿಕವಾಗಿ ಗುರು ಬಸವಣ್ಣನವರು ಇಟ್ಟುಕೊಂಡಿರಲಿಲ್ಲ. "ಮಹಾಮನೆ" ಒಂದು ವಿಶ್ವಸ್ಥ ಸಂಸ್ಥೆ. ಶರಣರು ತಮಗೆ ಅಗತ್ಯವಿದ್ದಷ್ಟು ಬಳಸಿ ಉಳಿದ ಗಳಿಕೆಯನ್ನು ಆ ವಿಶ್ವಸ್ಥ ಸಂಸ್ಥೆಗೆ ನೀಡುತ್ತಿದ್ದರು. ಪುನಃ ತಮಗೆ ಅನುವು ಆಪತ್ತು ಅಗತ್ಯ ಒದಗಿದಾಗ ಆ ವಿಶ್ವಸ್ಥ ಸಂಸ್ಥೆಯಿಂದ ಪಡೆದುಕೊಳ್ಳುತ್ತಿದ್ದರು. ಹೀಗಾಗಿ ಶರಣರಿಗೆ ಇಂದಿಗೆಂತು, ನಾಳೆಗೆಂತು ಎಂಬ ಭಯ, ಆತಂಕ ಕಾಡುತ್ತಿರಲಿಲ್ಲ. ವಿಶ್ವಸ್ಥ ಸಂಸ್ಥೆಯ ನಿಧಿ ಶರಣರದು, ಶರಣರಿಗಾಗಿ, ಶರಣರಿಂದ ರೂಪುಗೊಂಡದ್ದು. ಆಯ್ದಕ್ಕಿ ಮಾರಯ್ಯ, ಲಕ್ಕಮ್ಮರು ಮಹಾಮನೆಯ ದಾಸೋಹ ನಿಧಿಯಿಂದಲೇ ಶರಣರ ದಾಸೋಹ ಮಾಡಿದ್ದಾರೆ.

ಕಾಶ್ಮೀರದ ಮಹಾರಾಜ ಮೋಳಿಗೆಯ ಮಾರಯ್ಯ (ಮಹಾದೇವ ಭೂಪಾಲ) ಮತ್ತು ಅವನ ಧರ್ಮಪತ್ನಿ ಮಹಾದೇವಿಯಮ್ಮ ಕಟ್ಟಿಗೆ ತರುವ ಕಾಯಕವನ್ನು ಅವಲಂಬಿಸಿದ್ದರು. ಒಮ್ಮೆ ಅವರ ನಿಷ್ಠೆಯನ್ನು ಪರೀಕ್ಷಿಸಲು ಗುರು ಬಸವಣ್ಣನವರು ಜಂಗಮ ವೇಷದಿಂದ ಬಂದು ಪ್ರಸಾದ ಸ್ವೀಕರಿಸಿ ಹೋಗುವಾಗ ಬಂಗಾರದ ತುಂಡುಗಳನ್ನು ಮನೆಯಲ್ಲಿ ಬಿಟ್ಟು ಹೋದರು. ಮಾರಯ್ಯನವರು ಮನೆಗೆ ಬಂದಾಗ ಬಂದ ಜಂಗಮನು ಬಂಗಾರದ ತುಂಡುಗಳನ್ನು ಬಿಟ್ಟು ಹೋದುದನ್ನು ಮಹಾದೇವಿ ತಿಳಿಸಿದಳು. ಇದು ಗುರು ಬಸವಣ್ಣನವರ ಕೆಲಸವೇ ಸರಿ ಎಂದು ಊಹಿಸಿ ಅವನ್ನು ಮರಳಿಸುವರು. ಇಂಥ ಸಂದರ್ಭದಲ್ಲಿ ನುಡಿದ ವಚನವಿದು. ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ, ಮೋಳಿಗೆಯ ಮಾರಯ್ಯ-ಮಹಾದೇವಿಯಮ್ಮ ಇವರ ಸರಳತೆ, ಪ್ರಾಮಾಣಿಕತೆ, ಅಪರಿಗ್ರಹ ಮುಂತಾದ ಆದರ್ಶಗಳನ್ನು ಜಗತ್ತಿಗೆ ಪ್ರದರ್ಶಿಸಲು ಗುರು

Digitalized by e-Sahithya Documentation Forum
Sponsored by Sarayu Foundation Trust

ಬಸವಣ್ಣನವರು ಅಕ್ಕಿಯನ್ನು ಚೆಲ್ಲಿಸುವ, ಬಂಗಾರದ ತುಂಡು ಇಡುವ ಪರೀಕ್ಷೆ ಮಾಡಿದ್ದಾರೆ.

1143. ಸಂಸಾರ ಯೋಗ

ಹುಳಿವಿಡಿದು ಘೃತವ ಕಾಂಬಂತೆ
ಅಕ್ಷರವಿಡಿದು ವಿದ್ಯವನರಿವಂತೆ
ಅನ್ನವ ಭೋಗಿಸಿ ಚೈತನ್ಯವ ಕೊಂಡಂತೆ
ಲಿಂಗದೇವನ ಶರಣರು
ಸತಿವಿಡಿದು ನಿರ್ವಾಣ ಸತಿ ಕಾಂಬರು ಕೇಳಾ ಪ್ರಭುವೆ

ಹೆಪ್ಪು ಹಾಕಿದ ಹಾಲು ಹುಳಿ ಮೊಸರಾಗುತ್ತದೆ. ಆ ಹುಳಿ ಮುಂದೆ ಸಿಹಿಯಾದ ತುಪ್ಪಕ್ಕೆ ಸಾಧನವಾಗುತ್ತದೆ. ವಿದ್ಯೆಯನ್ನು ಕಲಿಯಲು ಅಕ್ಷರಗಳು ಸಾಧನವಾಗುತ್ತವೆ. ಅನ್ನವನ್ನು ಉಂಡು ಶರೀರಕ್ಕೆ ಚೈತನ್ಯವನ್ನು ಪಡೆದುಕೊಳ್ಳಲಾಗುತ್ತದೆ. ಹಾಗೆ ಶರಣರು ಸಂಸಾರದಲ್ಲಿ ಇದ್ದುಕೊಂಡೂ ನಿರ್ವಾಣ ಅರ್ಥಾತ್ ಮುಕ್ತಿ ಎಂಬ ಸ್ಥಿತಿಯನ್ನು ಪಡೆಯುವರು.

ಗುರು ಬಸವಣ್ಣನವರು ಪ್ರತಿಪಾದಿಸಿದ ಹಲವಾರು ತತ್ತ್ವಗಳಲ್ಲಿ ಗೃಹಸ್ಥ ಧರ್ಮವೂ ಒಂದು. ಕೇವಲ ಸನ್ಯಾಸದಿಂದ ಮಾತ್ರ ಮುಕ್ತಿ ಎಂಬ ನಂಬಿಕೆ ತುಂಬಿದ್ದ ಕಾಲದಲ್ಲಿ ಆದರ್ಶಯುಕ್ತವಾದ ಅಧ್ಯಾತ್ಮ ಸಾದನೆಯಿಂದ ಕೂಡಿದ ಗೃಹಸ್ಥನೂ ಮುಕ್ತಿಯನ್ನು ಪಡೆಯಬಲ್ಲ ಎಂಬುದನ್ನು ಸಾರಿ ಹೇಳಿ, ಅನೇಕ ಗೃಹಸ್ಥ ಶರಣರಿಗೆ ಸಾಧನೆಗೆ ಅನುವು ಮಾಡಿಕೊಟ್ಟರು. ಸಂಸಾರವು ಕೆಸರಿನ ಗುಂಡಿಯಾಗದೆ ನೀರಿನ ಮಡುವಾದರೆ ಅದರಲ್ಲಿ ಈಜಲು ಸಾಧ್ಯ ಎಂಬ ತತ್ತ್ವದಂತೆ ಸಂಸಾರ ಯೋಗಿಗಳಾಗಿ ಲೌಕಿಕದಲ್ಲಿದ್ದೂ ಪರಮಾರ್ಥವನ್ನು ಸಾಧಿಸುವುದನ್ನು ಕಲಿಸಿದರು. ಆದರ್ಶ ದಾಂಪತ್ಯ ಮತ್ತು ವಿರಕ್ತಿ ಎರಡಕ್ಕೂ ಸ್ವತಃ ಬಸವಣ್ಣನವರೇ ಮಾದರಿಯಾದರು.. ತಾಯಿ ನೀಲಾಂಬಿಕೆಯನ್ನು ತಮ್ಮ ಮಟ್ಟಕ್ಕೆ ಏರಿಸಿಕೊಂಡರು. ಕಡೆಗೆ ವೈರಾಗ್ಯದ ಪರಮ ಸ್ಥಿತಿಯನ್ನು ಉಭಯತರೂ ಮುಟ್ಟಿದರು.

ಮಡದಿ ಎನ್ನಲಾಗದು ಎನ್ನನು ಬಸವಣ್ಣನಿಗೆ
ಪುರುಷನೆನ್ನಲಾಗದು ಬಸವನ ಎನಗೆ
ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು
ಬಸವನೆನ್ನ ಶಿಶುವಾದನು. ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿವ್ಯವ ಮೀರಿ ಬಸವನೊಳಗಾನಡಗಿದೆ.

1144. ಶರಣರ ಸಂಗ ಬಲು ಕಷ್ಟ

ಅಲ್ಲ ಎನಬಾರದು, ಅಹುದೆನಬಾರದು
ಲಿಂಗದೇವನ ಶರಣರ ಸಂಗ
ಕರಗಸದ ಬಾಯಿಧಾರೆಯಂತೆ ಅತಿ ಬಿರಿದಯ್ಯಾ


ಗುರು ಬಸವಣ್ಣನವರ ಖಾಸಗಿ ಜೀವನ ಕುರಿತು, ಸತಿ-ಪತಿ ಸಂಬಂಧ ಕುರಿತು ಶರಣರು ಬಹುಶಃ ಕೆದಕಿ ಕೆದಕಿ ಪ್ರಶ್ನೆ ಕೇಳಿದ್ದಾರೆ. (ಉದಾ : 1148ನೆಯ ವಚನ) ಸಂಕೋಚಗೊಂಡ ಗುರು ಬಸವಣ್ಣನವರು (ನಾಚಿಕೆಯಿಂದ) ಉತ್ತರ ಹೇಳಲಾಗದೆ ನುಡಿಯುತ್ತಾರೆ. "ನೀವು (ಶರಣರು) ಹೇಳುವುದನ್ನು ಅಲ್ಲ ಎನ್ನಲಾರೆ, ಅಹುದೂ ಎನ್ನಲಾರೆ. ಲಿಂಗದೇವನ ಶರಣರ ಒಡನಾಟ ಗರಗಸದ ಬಾಯಿಧಾರೆಯಂತೆ ಬಹಳ ಕಷ್ಟಕರ" ಎಂದು ಉತ್ತರಿಸುತ್ತಾರೆ.

ವಚನಾಮೃತ

ಹಾಡಿರೋ ಜಿಹ್ವೆ ದಣಿಯದೆ ಲಿಂಗವ, ನೋಡಿರೋ ಕಂಗಳು
ದಣಿಯದೆ ಲಿಂಗವ. ಮಾಡಿರೋ ಪೂಜೆಯ ಹಸ್ತ ದಣಿಯದೆ
ಲಿಂಗವ. ಬೇಡಿರೋ ವರವ ಮನ ಬಂದ ಪರಿಯಲ್ಲಿ
ನಮ್ಮ ಅಖಂಡೇಶ್ವರ ಲಿಂಗವ. - ಜೇವರಗಿಯ ಷಣ್ಮುಖ ಶಿವಯೋಗಿಗಳು



Digitalized by e-Sahithya Documentation Forum
Sponsored by Sarayu Foundation Trust



REGISTERED KA/BGW/50/2012-2014. RNI No.19980/70, POSTED AT MBC BANGALORE GPO ON 3RD.10TH,20TH OF EVERY MONTH, LICENCED TO POST WITHOUT PREPAMENT WPP-17, PAGES 32+4(COVER PAGES)

Digitalized by e-Sahithya Documentation Forum
Sponsored by Sarayu Foundation Trust